ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ

ಸಂಚಿಕೆ ೧, ಜೂನ್ 2013

ಆತ್ಮೀಯ ಓದುಗರೇ,

ದೇವರ ದಯೆ ಮತ್ತು ತಮ್ಮೆಲ್ಲರ ಹಾರೈಕೆಯೊಂದಿಗೆ ಆಸ್ಟ್ರೇಲಿಯಾದಲ್ಲಿ ಕನ್ನಡದ ಮೊದಲ ಇ-ಸಂಚಿಕೆ "ಚಿಲುಮೆ" ಯನ್ನು ತಮ್ಮ ಕೈಗೊಪ್ಪಿಸುತ್ತಿದ್ದೇವೆ, ತಾವು ಇದನ್ನು ಅಪ್ಪಿ, ಒಪ್ಪಿ ಹರಸಿದಲ್ಲಿ ನಮ್ಮ ಶ್ರಮ ಸಾರ್ಥಕ

ಇಂತಿ - "ಚಿಲುಮೆ" ಯ ಸಂಪಾದಕೀಯ ಸಮಿತಿ

ಚಿಲುಮೆಯ ಒಳಗೆ

೧. ಕೆ. ಎಸ್. ನ ಬಗ್ಗೆ ಲೇಖನ ... ಪು. ೩

೨. ರೀ ರೆಸಿಪಿ ಕೊಡ್ತೀರಾ! ... ಪು. ೪

೩. ಕಥಾ ಚಿಲುಮೆ ... ಪು. ೬

೪. ಕಾವ್ಯ ಚಿಲುಮೆ ... ಪು. ೭

೫. VIVID Photos etc ... ಪು. ೧೦

೬. ಗಣ್ಯರ ಹಾರೈಕೆ ... ಪು. ೨ & ೫



ಹಿರಿ-ನುಡಿ

ಜೀವನದಲ್ಲಿ ನೀನೊಬ್ಬನೇ ಏನಾದರೂ ಸಾಧಿಸಿ ಮೇಲೆ ಬರುವುದಕ್ಕಿಂತ ಹತ್ತು ಜನರನ್ನು ಮೇಲೆ ತಂದರೆ ಅದಕ್ಕಿಂತ ದೊಡ್ಡ ಸಾಧನೆ ಬೇರೊಂದಿಲ್ಲ.

Chilume Circulated in around 10 countries

ಮೊದಲ ಮಾತು

ಕನ್ನಡವೆಂದರೆ ಬರಿ ನುಡಿಯಲ್ಲ ಹಿರಿದಿದೆ ಅದರರ್ಥ. ಈ ಕವಿ ವಾಣಿ ಮೊಳಗಿದಾಗ ಏನೋ ಒಂದು ಉತ್ಸಾಹ ಉಕ್ಕುತ್ತೆ ಅಲ್ಲವೇ! ಚಿಲುಮೆಯ ಹಾಗೆ ಎತ್ತೆತ್ತರಕ್ಕೆ ಚಿಮ್ಮುವ ಈ ಸಂತೋಷ, ನಮ್ಮ ಭಾಷಾಭಿಮಾನದ ವೈಶಿಷ್ಟ್ಯ. ನಮ್ಮ ನಾಡು, ನಮ್ಮ ಜನ, ನಮ್ಮ ಭಾಷೆ ಇವೆಲ್ಲ ನಮ್ಮ ಜೀವನದ ಅವಿಭಾಜ್ಯ ಅಂಗ. "ಆರಂಕುಶವಿಟ್ಟೋಡಂ ನೆನೆವುದೆನ್ನ ಮನಂ...." ಇಂದ ಹಿಡಿದು ಇತ್ತೀಚಿನ "ಕನ್ನಡ - ಜೀವಸ್ವರ" ರಚನೆವರೆಗೂ ನೋಡಿದಾಗ ನಮ್ಮ ಸಾಹಿತ್ಯ ಅದೆಷ್ಟು ಶ್ರೀಮಂತ ಎಂದು ಹೆಮ್ಮೆಯಾಗುತ್ತದೆ. ಅತಿ ಹೆಚ್ಚು ಜ್ಞಾನ ಪೀಠ ಪ್ರಶಸ್ತಿ ತನ್ನದಾಗಿಸಿಕೊಂಡಿರುವ ನಮ್ಮ ಕನ್ನಡವನ್ನು ನಾವೆಲ್ಲರೇ ಬೆಳೆಸಬೇಕು.

ಎಲ್ಲ ಭಾಷೆಗಳು ಇರಲಿ, ಕನ್ನಡ ನಮ್ಮ ಉಸಿರಾಗಿರಲಿ ಎಂದು ನಾವೆಲ್ಲರೂ ಪಣ ತೊಡಬೇಕು. ಶ್ರೀಗಂಧದ ನಾಡು, ಚಿನ್ನದ ಬೀಡು, ಯಾವುದಕ್ಕೆ ಕಮ್ಮಿ ಇದೆ ಕರುನಾಡು. ಹೊರ ದೇಶದಲ್ಲಿದ್ದೂ ಸಮಯ ಮಾಡಿಕೊಂಡು ನಮ್ಮ ಸಂಸ್ಕೃತಿ, ಕಲೆ, ಭಾಷೆಗೆ ಇಲ್ಲಿನ ಜನರ ಬತ್ತದ ಭಾಷಾ ಉತ್ಸಾಹ ನಿಜಕ್ಕೂ ಪ್ರಶಂಸನೀಯ. ಬನ್ನಿ ನಾವೆಲ್ಲ ಸೇರಿ ತಾಯಿ ಭುವನೇಶ್ವರಿಗೆ ಮತ್ತಷ್ಟು ಮೆರಗು ತರೋಣ. ಇದು ನಿಮ್ಮ ಪತ್ರಿಕೆ. ನಿಮ್ಮ ಕನ್ನಡದ ಅಭಿರುಚಿ ಏನೇ ಇರಬಹುದು. ಕಥೆ, ಕವನ, ಹಾಸ್ಯ, ತಂತ್ರಜ್ಞಾನ, ವಿಮರ್ಶೆ, ಪ್ರವಾಸ, ಸಿನಿಮಾ ಇತ್ಯಾದಿ. ಹೆಚ್ಚು ಹೆಚ್ಚು ಕನ್ನಡ ಬಳಕೆಗೆ ನಮ್ಮ ಪ್ರೋತ್ಸಾಹವಿದೆ. ಹೀಗಾಗಿ ಹಿಂಜರಿಯದೆ ಈ ಒಳ್ಳೆಯ ಕಾರ್ಯದಲ್ಲಿ ಪಾಲ್ಗೊಳ್ಳಿ. ನಿಮ್ಮ ಲೇಖನ ಇತ್ಯಾದಿಯನ್ನು ನಮಗೆ ಕಳಿಸಿ. ಕನ್ನಡ ಪೋಷಿಸುವ ಈ ನಮ್ಮ ಕಾರ್ಯದಲ್ಲಿ ನಿಮ್ಮ ಜೊತೆ ನಮ್ಮೊಂದಿಗೆ ಇದೆ ಎಂದು ಭಾವಿಸಿದ್ದೀವಿ. ಬನ್ನಿ ಜೊತೆಯಲ್ಲಿ ಸಾಗೋಣ ...

ಈಗಿನ ಸುದ್ದಿ

ಸಿಡ್ನಿ ಯ ಎಪ್ಪಿಂಗ್ ನಲ್ಲಿ ಕನ್ನಡದ ಮೂರನೇ ಶಾಲೆ : ಮೂರು ನೂರಾಗಲಿ

ಕನ್ನಡದ ತವರೂರು ಕರ್ನಾಟಕದಲ್ಲಿ, ಕನ್ನಡ ಶಾಲೆಗಳು ಮುಚ್ಚುತ್ತಿದೆ ಎಂದು ಕೇಳುತ್ತಿರುವ ಹಿನ್ನಲೆಯಲ್ಲಿ, ಆಸ್ಟ್ರೇಲಿಯಾದ ಸಿಡ್ನಿ ನಗರದಲ್ಲಿ ಹೆಚ್ಚು ಹೆಚ್ಚು ಕನ್ನಡ ಶಾಲೆಗಳು ತೆರೆಯುತ್ತಿವೆ ಎಂಬುದು ಸಂತಸದ ವಿಚಾರ. ಸುಗಮ ಕನ್ನಡ ಕೂಟದ ಆಶ್ರಯದಲ್ಲಿ, ಜೂನ್ ೨ ರಂದು ಸಿಡ್ನಿ ನಗರದ ಎಪ್ಪಿಂಗ್ ನಲ್ಲಿ ಮೂರನೇ ಕನ್ನಡ ಶಾಲೆ ಉದ್ಘಾಟನೆಗೊಂಡಿತು. ದೀಪ ಹಚ್ಚಿ ಶುಭ ಕೋರುತ್ತ ಮಾತನಾಡಿದ ಗಣ್ಯರು, ಕನ್ನಡ ಜೀವನದ ಉಸಿರಾಗಬೇಕು ಎಂದು ಒತ್ತಿ ಹೇಳಿದರು. ಮಾಜಿ ಯು.ಐ.ಎ ಅಧ್ಯಕ್ಷರಾದ ರಾಜ್ ನಟರಾಜನ್ ಮಾತನಾಡುತ್ತ ಬೇರೆ ಬೇರೆ ಸಂಸ್ಕೃತಿಗೆ ಒಗ್ಗಿಕೊಂಡರೂ, ನಮ್ಮ ಮಾತೃ ಭಾಷೆ ಬೇರೆಯವರಿಗೂ ಹಂಚುತ್ತಾ ಸಾಗಬೇಕು ಎಂದು ತಿಳಿಸಿದರು.

ಪ್ರೊ. ಸಿಡ್ನಿ ಶ್ರೀನಿವಾಸ್ ಮಾತನಾಡುತ್ತ, ಹೆಚ್ಚು ಹೆಚ್ಚು ಕಥೆ ಕಾದಂಬರಿಗಳ ಪರಿಚಯ ಮಕ್ಕಳಿಗಾಗಬೇಕು ಎಂದರು. "ಮುಖಾ-ಮುಖಿ" ಮತ್ತು "ತಲ್ಲಣ" ಚಲನಚಿತ್ರದ ಖ್ಯಾತಿಯ ನಟ, ನಿರ್ದೇಶಕ ಎನ್. ಸುದರ್ಶನ್ ಮಾತನಾಡಿ, ಮನೆಯಲ್ಲಿ ಪೋಷಕರು ಹೇಗೆ ಒತ್ತು ಕೊಟ್ಟು ಮಕ್ಕಳಿಗೆ ಕನ್ನಡ ಕಲಿಸಬಹುದು ಎಂದು ವಿವರಿಸಿದರು. ಕವಿಯತ್ರಿ ಅನುಶಿವರಾಂ, ತಮ್ಮ ಬಾಲ್ಯದಲ್ಲಿ ಅಡುಗೆ ಮನೆಯಿಂದ ಹೇಗೆ ಹೆಚ್ಚು ಕನ್ನಡದ ಪದಗಳನ್ನು ಕಲಿತೆ ಎಂದು ಜ್ಞಾಪಿಸಿಕೊಂಡರು. ಹತ್ತಾರು ಮಕ್ಕಳು ಇಂದಿನ ಶಾಲೆ ಶುರುಮಾಡಲು ಸಂತಸದಿಂದ ಬಂದಿದ್ದರು. ಕಾರ್ಯಕ್ರಮದ ನಂತರ ಬಿಸಿ ಕೇಸರಿ ಭಾತಿನ ಘಮ ಘಮ ಮತ್ತು ಕಾಫಿ ಚಳಿಗಾಲಕ್ಕೆ ಹೇಳಿ ಮಾಡಿಸಿದಂತಿತ್ತು.

ಸಿಡ್ನಿ ನಗರದಲ್ಲಿ ಸುಮಾರು ೬೦ಕ್ಕೂ ಹೆಚ್ಚು ಮಕ್ಕಳಿಗೆ ಪಾಠದ ಜೊತೆ ಕಂಪ್ಯೂಟರ್ ನಲ್ಲಿ ಕನ್ನಡ ಟೈಪಿಂಗ್ ಕಲಿಸುವ ಹೊಣೆ ಹೊತ್ತಿರುವ ಸುಗಮ ಕನ್ನಡ ಕೂಟದ ಮುಖ್ಯ ಮೇಲ್ವಿಚಾರಣೆ ಹೊತ್ತ ಕನಕಾಪುರ ನಾರಾಯಣ ಮತ್ತು ಸಹಕಾರ್ಯಕರ್ತರು, ಇನ್ನೂ ಹೆಚ್ಚು ಶಾಖೆಗಳನ್ನು ತೆರೆಯಲು ಉತ್ಸುಕರಾಗಿದ್ದಾರೆ. ಕನ್ನಡ ಶಾಲಾ ವಿವರಗಳಿಗೆ ಕೆಳಗಿನ ಲಿಂಕ್ ಕ್ಲಿಕ್ ಮಾಡಿ.

http://www.sugamakannada.com/school.html

ಕನ್ನಡದ ಗಂಧ ಎಲ್ಲೆಡೆ ಪಸರಿಸಲಿ ಎಂಬ ಸಂದೇಶ ನಮ್ಮ ಕರ್ನಾಟಕದಲ್ಲೂ ಹರಡಲಿ ಅಲ್ಲವೇ?

ಶಾಲೆಯ - ಉದ್ಘಾಟನೆಯ ಸಂದರ್ಭದಲ್ಲಿ ತೆಗೆದ ಚಿತ್ರ

ವೀಕ್ಷಿಸಿ

ರಘು ದೀಕ್ಷಿತ್ ರ "ಪ್ರೀತಿಯ ಮನಶಾಂತಿಯ" ವೀಕ್ಷಿಸಲು ಮೇಲಿನ ಚಿತ್ರ ಕ್ಲಿಕ್ ಮಾಡಿ (Click picture to view)

ಜಯಂತ್ ಕಾಯ್ಕಿಣಿ ರಚಿತ ಕನ್ನಡ ಜೀವಸ್ವರ ವೀಕ್ಷಿಸಲು ಮೇಲಿನ ಚಿತ್ರ ಕ್ಲಿಕ್ ಮಾಡಿ (Click picture to view)

ಆನಂದಿಸಿ

ನಿಮ್ಮ ಕಥೆ, ಕವನ, ಸಲಹೆ ಇತ್ಯಾದಿ ನಮಗೆ ಕಳುಹಿಸಿ. ನಮ್ಮ ಇ-ಮೇಲ್ – HORANADACHILUME@GMAIL.COM

ಹೊರನಾಡ ಚಿಲುಮೆಗೆ - ಗಣ್ಯರ ಶುಭ ಹಾರೈಕೆಗಳು

॥ ಶ್ರೀ ಮಾತಾ ॥

ಉಕ್ಕುತ್ತಿದೆ ಉತ್ಸಾಹಿಗಳ ಒಲುಮೆ
ದಕ್ಕುತ್ತಿದೆ ಉಳಿದೆಲ್ಲರ ನಲುಮೆ
ಹಕ್ಕಿಂದ ಕರುನಾಡ ಭಾಷೆಯ ಬಲುಮೆ
ಹೆಕ್ಕಿತೆಗೆದಾ ಆಸ್ಟ್ರೇಲಿಯಾರ "ಚಿಲುಮೆ"

॥ ಲಂಚಾವತಾರಿ ॥
ಮಾಸ್ತರ್ ಹಿರಣ್ಣಯ್ಯ
ಬೆಂಗಳೂರು

ಕಡಲಾಚೆಯಿಂದ ಕನ್ನಡದ ತೇರನ್ನು ಎಳೆಯುತ್ತಿರುವ ನಿಮ್ಮ ಕನ್ನಡ ಪ್ರೀತಿಗೆ, ಉತ್ಸಾಹಕ್ಕೆ ಗೌರವಪೂರ್ವಕ ನಮಸ್ಕಾರ.

ಜಗತ್ತಿನ ಯಾವಯಾವುದೋ ಮೂಲೆಗಳಲ್ಲೆಲ್ಲ ಕನ್ನಡದ ಬೀಜಗಳನ್ನು ಬಿತ್ತಬೇಕು, ಬೆಳೆಸಬೇಕು. ಆಗಲೇ ಕನ್ನಡ ವಿಶ್ವವ್ಯಾಪಿಯಾಗಿ ಬೆಳೆಯುವುದು. ನಿಮ್ಮಂಥ ಧೀಮಂತರು ಆ ಕೆಲಸವನ್ನು ನಿಷ್ಠೆಯಿಂದಲೂ, ಶ್ರದ್ಧೆಯಿಂದಲೂ ನಿರಂತರ ಮಾಡುತ್ತಾ ಬರುತ್ತೀದ್ದೀರಿ. ನಿಮ್ಮ ಹೊಸ ಪ್ರಯತ್ನ ನಿಜಕ್ಕೂ ಅರ್ಥಪೂರ್ಣವಾದುದು. ನಿಮ್ಮನ್ನು ಮನಸಾ ಅಭಿನಂದಿಸುತ್ತಾ ಎಲ್ಲ ಶುಭಗಳನ್ನೂ ಕೋರುತ್ತೇನೆ.

ಪ್ರೀತಿಯಿಂದ

ಪ್ರೊ|| ಶ್ರೀ ಕೃಷ್ಣೇ ಗೌಡ, ಮೈಸೂರು

ಪ್ರಿಯರೆ,
ಕನ್ನಡ ಕಿವಿಯ ಭಾಷೆಯಲ್ಲ, ಅದುಂದು ಮನಃದ್ರವ್ಯ..
ಕನ್ನಡ ಕಿವಿಯ ಅಳವನ್ನಸ್ತು ಮಾಧ್ಯಮವಲ್ಲ,
ಅದುಂದು ಜ್ಞಾನೇಂದ್ರಿಯ..
ಕನ್ನಡ ಕಿವಿಯ ವಿಂಚಿಯದ ನಂಟಲ್ಲ, ಅದುಂದು ಮುಕ್ತ
ಮನಸಿಯ ಕಂಠದ..
ಕನ್ನಡ ಎಂದರೆ ಮುಮತೆ, ಕನ್ನಡ ಎಂದರೆ ಸಮತೆ..
ಕನ್ನಡ ಎಂದರೆ ಒಂದು ಅನಿಯಕ್ತ ಪದುಮ..
- ಈ ನಾಣಿಕೆಯೇ ನಮ್ಮೆಲ್ಲರನ್ನ ಬ್ಯೂಸುವ
ಬೆಳಸುವ ಶಕ್ತಿಯಾಗಲಿ..
'ಹೊರನಾಡ ಚಿಲುಮೆ' - ಚಿಂತನೆಗಳು ಕನಃಮತೆಯ
ಮುಕ್ತ ಕವಿತಂಮಾಗಲಿ.. ಈ ಕವಿತ
ಹೊಸ ಸ್ಫೂರ್ತಿ ಬೆಳೆಸುವಲ್ಲಿ ಸದಾ ಕೆರೆದಿರಲಿ..

ಆತ್ಮೀಯ, ಅಳಿಮನದಿಂದ
ನಿನ್ನ
ಪ್ರಮುತ
ಜಯಂತ್ ಕಾಯ್ಕಿಣಿ
30.5.2013.

jayantkaikini@gmail.com

ಕೆ. ಎಸ್. ನರಸಿಂಹ ಸ್ವಾಮಿ

(26-1-1915 ರಿಂದ 27-12-2003)

ಲೇಖಕರು: ಸಿಡ್ಡಿ ಶ್ರೀನಿವಾಸ್

ಉಪ ಮುಖ್ಯಸ್ಥರು, ಏರೋಸ್ಪೇಸ್ ಶಾಲೆ, ಮೆಕ್ಯಾನಿಕಲ್ & ಮೆಕ್ಯಾಟ್ರೋನಿಕ್ ಇಂಜಿನಿಯರಿಂಗ್, ಯೂನಿವರ್ಸಿಟಿ ಆಫ್ ಸಿಡ್ನಿ,



ಮೂವತ್ತು ಅಥವಾ ನಲವತ್ತು ವರ್ಷಗಳ ಹಿಂದಿನ ಮಾತು. ಒಂದು ಚಿಕ್ಕ ಊರು. ಅಲ್ಲಿಗೆ ನರಸಿಂಹಸ್ವಾಮಿಗಳ ಭೇಟಿ ಮತ್ತು ಭಾಷಣ. ಅವರು ಭಾಷಣ ಮುಗಿಸುತ್ತಿದ್ದಂತೆ ಜನರ ಕೋರಿಕೆ, "ಮೈಸೂರ ಮಲ್ಲಿಗೆಯಿಂದ ಯಾವುದಾದರೂ ಪದ್ಯ ಓದಿ". ಈ ಕೋರಿಕೆ ಎಂದೆಂದೂ ಇದ್ದದ್ದೇ. ಕೆ ಎಸ್ ಎನ್ ಹೇಳಿದರು, "ಓದೋದಕ್ಕೆ ಅಡ್ಡಿ ಇಲ್ಲ. ಆದರೆ ನಾನು ಆ ಪುಸ್ತಕ ತಂದಿಲ್ಲವಲ್ಲ". ಸಭೆ ಸುಮ್ಮನಾಯಿತು. ಆದರೆ ಓರ್ವ ಮಹಿಳೆ ಅಲ್ಲಿಂದ ಎದ್ದು ಹೊರಟಿದ್ದನ್ನು ಯಾರೂ ಗಮನಿಸಿರಲಿಲ್ಲ. ಆಕೆ ಹಿಂತಿರುಗಿ ಬಂದು ಕೆ ಎಸ್ ಎನ್ ಅವರಿಗೆ ತನ್ನ ಮನೆಯಲ್ಲಿದ್ದ "ಮೈಸೂರು ಮಲ್ಲಿಗೆ" ಪುಸ್ತಕವನ್ನು ನೀಡಿದಳು. ಅವರು ಪದ್ಯವನ್ನು ಓದಿದರು. ಇದು ನರಸಿಂಹಸ್ವಾಮಿಗಳು ಪಡೆದುಕೊಂಡು ಬಂದಿದ್ದ ಭಾಗ್ಯ, ಜನಪ್ರಿಯತೆ. ಜನರ ಕವಿ ನರಸಿಂಹಸ್ವಾಮಿ. ಹಿಂದೆ ಮದುವೆಯಾದ ಹುಡುಗ ಹುಡುಗಿಗೆ ಮೈಸೂರ ಮಲ್ಲಿಗೆ ಪುಸ್ತಕವನ್ನು ಉಡುಗೊರೆ ನೀಡುವುದು ಒಂದು ಪದ್ಧತಿಯೇ ಆಗಿಹೋಗಿತ್ತು.

ಇವರ ಮೊದಲ ಕೃತಿಯೇ ಮೈಸೂರ ಮಲ್ಲಿಗೆ. ಈ ಪುಸ್ತಕ ಮೂವತ್ತು ಮುದ್ರಣಗಳನ್ನು ಕಂಡಿರುವುದು ಒಂದು ಬಗೆಯ ರಿಕಾರ್ಡ್. ಕನ್ನಡದ ಮತ್ತಾವ ಪುಸ್ತಕವೂ ಇಷ್ಟು ಮುದ್ರಣ ಕಂಡಿರಲಾರದು. ಅದೂ ಕವಿತಾ ಸಂಕಲನಗಳು ಪುನರ್ಮುದ್ರಣ ಕಾಣುವುದೇ ಅಪರೂಪ. ಹಾಗೆಯೇ ಅವರ

"ಹತ್ತು ವರುಷದ ಹಿಂದೆ ಮುತ್ತೂರ ಕೇರಿಯಲಿ ಅತ್ತಿತ್ತ ಅಲೆದವರು ನೀವಲ್ಲವೇ,
ಹತ್ತಿರದ ಹೆಣ್ಣೆಂದು ಮತ್ತೆ ಸುತ್ತೂರಿನಲಿ ಒಪ್ಪಿ ಕೈ ಹಿಡಿದವರು ನೀವಲ್ಲವೇ"

ಹಾಡನ್ನು ಮದುವೆಗಳಲ್ಲಿ ಹಾಡಿ ಹುಡುಗ, ಹುಡುಗಿಯರನ್ನು ಗೇಲಿ ಮಾಡುವುದು ಸಂಪ್ರದಾಯವೇ ಆಗಿತ್ತು. ಇದು ಯಾವ ಕವಿಯಾದರೂ ಕನಸಿನಲ್ಲಿ ಕಾಣಬಹುದಾದ ಜನಪ್ರಿಯತೆ. ಅದು ನನಸಾದದ್ದು ಕೆ ಎಸ್ ಎನ್ ಅವರಲ್ಲಿ ಮಾತ್ರ.

ನರಸಿಂಹಸ್ವಾಮಿಯವರು ಮೊದಲಲ್ಲಿ ರಚಿಸಿದ್ದು ಯುವ ದಂಪತಿಗಳ ಕವಿತೆ. ಪ್ರೇಮ, ಸಡಗರ, ಸರಸ ಸಲ್ಲಾಪ, ಇತ್ಯಾದಿ. "ರಾಯರು ಬಂದರು ಮಾವನ ಮನೆಗೆ", "ಬಳೆಗಾರ ಚನ್ನಯ್ಯ", ಶಾನುಭೋಗರ ಮಗಳು", "ನವಿಲೂರಿನೊಳಗೆಲ್ಲ ನೀನೆ ಬಲು ಚೆಲುವೆ", ಈ ಕವಿತೆಗಳು ಹಾಡಾದವು, ಮನೆ ಮಾತಾದವು. ಇದನ್ನು ರಚಿಸಿದ್ದು ಯಾರು ಎನ್ನುವುದು ತಿಳಿಯದಿದ್ದರೂ ಜನ ಹಾಡುವುದಕ್ಕೆ, ಗುನುಗುವುದಕ್ಕೆ ಅಡ್ಡಿ ಇರಲಿಲ್ಲ.

ಜನ ಒಮ್ಮೆಗೇ ಇವರ ಕವಿತೆಗಳಿಗೆ ಮನಸೋತದ್ದು ಆಶ್ಚರ್ಯವಲ್ಲ. ಇವರ ಕವಿತೆ ಎಲ್ಲರ ಅನುಭವ ಅಲ್ಲವೇ? "ಮುನಿಸು ಮಾವನ ಮೇಲೆ, ಮಗಳೇನ ಮಾಡಿದಳು?", "ಆರು ಮೂರೊಂಭತ್ತು, ಹೋಗಲಿದು ಮನೆಗೆ, ನುಡಿದ ಗರ ಬೀಳುವುದು ಸೋಲೆ ಸರಿ ನಿಮಗೆ", "ಅಕ್ಕಿ ಆರಿಸುವಾಗ ಚಿಕ್ಕ ನುಚ್ಚಿನ ನಡುವೆ ಬಂಗಾರವಿಲ್ಲದ ಬೆರಳು", "ಮದುವೆಯಾಗಿ ತಿಂಗಳಿಲ್ಲ ನೋಡಿರಣ್ಣ ಹೇಗಿದೆ?", "ತೌರ ಸುಖದೊಳಗೆನ್ನ ಮರೆತಿಹಳು ಎನ್ನದಿರಿ, ನಿಮ್ಮ ಪ್ರೇಮದ ಒರೆಯ ನೀವೆ ಹಚ್ಚಿ" ಈ ಸಾಲುಗಳು ನನ್ನ ನಿಮ್ಮ ಎಲ್ಲರ ಅನುಭವ.

ಇಂತಹ ನಾಲ್ಕಾರು ಸಂಗ್ರಹಗಳನ್ನು ತಂದ ಮೇಲೆ, ಕೆ ಎಸ್ ಎನ್ ತಮ್ಮ ಶಿಲಾಲತೆ ಸಂಕಲನದಲ್ಲಿ ದಾಂಪತ್ಯದ ಜಾಡನ್ನ ಬಿಟ್ಟು ಮಿಕ್ಕ ವಿಷಯಗಳತ್ತ ಹೊರಳಿದರು. ಇವರ ಶೈಲಿ ಬೇರೆ ಆಯಿತು. ಮುಂದೆ ಬಂದ ಪ್ರಸಿದ್ಧ ಕವಿತೆಗಳನ್ನು ಹಾಡುವುದು ಸಾಧ್ಯವಿಲ್ಲ. "ಗಡಿಯಾರದಂಗಡಿಯ ಮುಂದೆ", "ಚರಿತ್ರೆಯ ಪ್ರಶ್ನೆ ಪತ್ರಿಕೆ", "ಸುವರ್ಣ ಮಧ್ಯಮ", "ತೆರೆದ ಬಾಗಿಲು" ಇತ್ಯಾದಿ. ಇವುಗಳಲ್ಲಿ ಕೇವಲ ಭಾವನೆಗಿಂತ ಅರ್ಥ ಮುಖ್ಯವಾಯಿತು. ಇವು ಕನ್ನಡದ ಅತ್ಯುತ್ತಮ ಕವಿತೆಗಳ ಸಾಲಿಗೆ ಸೇರುತ್ತವೆ. ಆದರೆ ಸಾಮಾನ್ಯ ಮನುಷ್ಯನಿಗೆ ನಿಲುಕದ ಅರ್ಥ ವ್ಯಾಪ್ತಿ. ಹೀಗಾಗಿ ಇವು ಜನಪ್ರಿಯವಾಗಲಿಲ್ಲ. ಇವರ ಮೈಸೂರು ಮಲ್ಲಿಗೆಯ ಕವಿತೆಗಳಿಗೆ, ಹಾಡುಗಳಿಗೆ ಜನ ತಮ್ಮ ಹೃದಯದಲ್ಲಿ ಸ್ಥಾನ ಕೊಟ್ಟರು; ಇವರ ಶಿಲಾಲತೆ ನಂತರದ ಕವಿತೆಗಳಿಗೆ ವಿಮರ್ಶಕರು, ಕಾವ್ಯ ವಿದ್ಯಾರ್ಥಿಗಳು ಸಾಹಿತ್ಯ ಚರಿತ್ರೆಯಲ್ಲಿ ಖಾಯಂ ಜಾಗ ನೀಡಿದರು.

ನರಸಿಂಹಸ್ವಾಮಿಗಳು ಕೆಲವು ಪ್ರಬಂಧ, ಅನುವಾದಗಳನ್ನೂ ಪ್ರಕಟಿಸಿದ್ದಾರೆ. ಇವರ ಕೆಲವು ಗೀತೆಗಳು ಚಲನಚಿತ್ರಗಳಲ್ಲಿಯೂ ಮೂಡಿಬಂದಿವೆ.
ಕೆ ಎಸ್ ಎನ್ ಅವರ ಇನ್ನೊಂದು ವಿಶೇಷತೆ ಅಂದರೆ, ಅವರು ತಮ್ಮ ಕವಿತೆಗಳಿಗೆ ತೀರಾ ಸಾಮಾನ್ಯ ಎನ್ನಬಹುದಾದ ಸನ್ನಿವೇಶಗಳನ್ನು ತೆಗೆದುಕೊಳ್ಳುತ್ತಾರೆ. ಇದನ್ನ ನೋಡಿ.

ಯಾರೋ ನನ್ನವರಂತೆ, ನನ್ನ ಸ್ನೇಹಿತರಂತೆ,
ಬಂದಿದ್ದರಂತೆ ಸಂಜೆಯಲಿ,
ನನ್ನ ಬಲ್ಲವರಂತೆ, ನನ್ನ ಕೇಳಿದರಂತೆ,
ಇಲ್ಲ ಎಂದಟ್ಟಿದಳು ಗೌರಿ.

ಮತ್ತೊಂದು ಗುಣ. ಇವರ ನಿರಾಭರಣ ಶೈಲಿ. "ಅಹಂಕಾರವಿಲ್ಲ, ಅಲಂಕಾರವಿಲ್ಲ, ನಿಜಾಕಾರ ನನ್ನ ಕವಿತೆ".

ದೇವರು, ದಿಂಡರು, ಬೇಡದ ವೈಭವ, ಕಲ್ಪನಾ ಸಾಮ್ರಾಜ್ಯ ಇವೆಲ್ಲದರಿಂದ ದೂರವಾಗಿದ್ದವರು ಕೆ ಎಸ್ ಎನ್. ಸರಳ ಮನುಷ್ಯ, ಸರಳ ಬಾವನೆ.

"ಪ್ರತ್ಯಂಗಲ ಕೆಸರ ತುಳಿದು, ಮಂಜನ್ನಗೆದು
ಏರಿಬರಬೇಕು, ಕೊಳೆಯಾದರೂ ಬಟ್ಟೆಗಳು.
ಮಣ್ಣು ಕೊಳೆಯಲ್ಲ, ಒಗೆದೀರಿ, ಹೋಗುವುದಿಲ್ಲ,
ನೀಲಿಯಲಿ ಒಗೆದದ್ದು ಬೆಳ್ಳಗಾಗುವುದಿಲ್ಲ"

ಜೀವನದಲ್ಲಿ ಬಡತನ, ಕಷ್ಟ ಏನೇ ಇದ್ದರೂ ಅವನ್ನು ಹೆಚ್ಚೂ ಕಡಿಮೆ ಕಾವ್ಯದಿಂದ ದೂರ ಇಟ್ಟರು. ಹಲವಾರು ಪ್ರಶಸ್ತಿಗಳು ಬಂದವು. ಇವರಿಗೆ ಬಂದದ್ದು ಜ್ಞಾನ ಪೀಠವಲ್ಲ, ಜನಮನದ ಹೃದಯ ಪೀಠ. 'ಮಾನವ ಜೀವದ ನೋವಿಗೆ, ನಲಿವಿಗೆ ಕನ್ನಡಿ" ಹಿಡಿದು, ಸಾಹಿತ್ಯದ ಯಾವುದೇ ವಾದ, ವಿವಾದಗಳಲ್ಲಿ ಸಿಕ್ಕಿಹಾಕಿಕೊಳ್ಳದೆ ನಿಂತ ವ್ಯಕ್ತಿ. ನಂತರ ತಾವೇ ಹೇಳಿದಂತೆ,

"ಅರಮನೆಯ ತೊರೆದು, ಬಾಗಿಲನು ತೆರೆದು, ತಿರುಗಿ ನೋಡದೆಯೆ ನಡೆದೆ". ಹೀಗಾದರೂ ಅವರ ಮೈಸೂರ ಮಲ್ಲಿಗೆ ಬಾಡುವುದಿಲ್ಲ.

ಆರೋಗ್ಯ

ಬಡವರ ಬಾದಾಮಿ ... ಗರ್ಮಾ ಗರಂ ಕಡ್ಲೇಕಾಯ್

ರಾಜಿ ಜಯದೇವ್

Mrs Raji Jayadev

B.Sc (Hons) Dip Nutr & Diet (Syd)
Accredited Practising Dietician

Phone: 97894000 or 97183484

Dietician for 22 years, currently working in Fairfield Hospital

ಕಡಲೇಕಾಯಿ ಅತ್ಯಂತ ಪೌಷ್ಠಿಕ ಆಹಾರ. ಬೆಲೆಯಲ್ಲಿ ಎಲ್ಲರಿಗೂ ಕೈಗೆಟುಕಬಹುದಾದ ಇದು ಬಡವರ ಬಾದಾಮಿಯೇ ಸರಿ. ಪ್ರತಿದಿನ ಸುಮಾರು 20 ರಿಂದ 30 ಗ್ರಾಂ ನಷ್ಟು ಕಡಲೇಕಾಯಿ ಬೀಜವನ್ನು ಹಸಿಯಾಗಿ ಇಲ್ಲವೇ ಹುರಿದು ಉಪ್ಪು ಬೆರೆಸಿಯಾದರೂ ತಿನ್ನಬಹುದು.

ತಿಂಗಳ ಕ್ವಿಜ್

ಬೀಜಗಳಲ್ಲಿ (ಉದಾ: ಕಡಲೆ ಕಾಯಿ) ಕೊಬ್ಬಿನಾಂಶ ಹೆಚ್ಚಿರುತ್ತದೆ. ದೇಹ ಕರಗಿಸುವವರು ಇವುಗಳನ್ನು ತಿನ್ನಬಾರದು. ಸರಿಯೋ - ತಪ್ಪೋ ?

ಉತ್ತರ ಮುಂದಿನ ಸಂಚಿಕೆಯಲ್ಲಿ

ಹೀಗೆ ದಿನನಿತ್ಯದ ಆಹಾರದ ಭಾಗವಾಗಿಸಿಕೊಳ್ಳಲು ಇದೋ ಇಲ್ಲಿದೆ ಹಲವು ಕಾರಣಗಳು.

೧. ರಕ್ತನಾಳಗಳನ್ನು ಸಡಿಲವಾಗಿರಿಸಲು ಬೇಕಾದ ಅತಿ ಹೆಚ್ಚು ಪ್ರೋಟೀನ್ ಮತ್ತು ಅರ್ಗಿನಿನ್ (ಅಮೈನೊ ಆಸಿಡ್) ಹೊಂದಿದೆ

೨. ಕೊಲೆಸ್ಟ್ರೋಲ್ ಪ್ರಮಾಣ ಕಡಿಮೆಮಾಡಲು ಸಹಾಯಕವಾದ ಒಳ್ಳೆಯ ಕೊಬ್ಬಿನಾಂಶವಿದೆ

೩. ಹೃದಯ ರೋಗ ತಡೆಯಲು , ರಕ್ತದೊತ್ತಡ ತಗ್ಗಿಸಲು ಮತ್ತು ಟೈಪ್ ೨ ಡಯಾಬಿಟಿಸ್ ಕಾಯಿಲೆಯ ನಿಯಂತ್ರಣಕ್ಕೆ ಬೇಕಾದ ಫೊಟಾಸಿಯಂ, ಮ್ಯಾಗ್ನೀಸಿಯಂ ಮತ್ತು ವಿಟಮಿನ್ ಎ ಇದೆ

೪. ಕಡಲೇಕಾಯಿ ಬೀಜದ ಮೇಲಿನ ಕೆಂಪು ಸಿಪ್ಪೆ ರೆಸ್ವೆರಟೊಲ್ ಎನ್ನುವ ಆಂಟಿ ಆಕ್ಸಿಡೆಂಟ್ ಹೃದಯರೋಗ ತಡೆಗೆ ಸಹಕಾರಿ

ಇದನ್ನು ತಿನ್ನುವ ಹಲವು ಬಗೆಗಳು -

೧. ಅನ್ನದ ಜೊತೆಯ ಸಾಂಬಾರ್ ಮತ್ತು ಮಜ್ಜಿಗೆ ಹುಳಿಗಳಲ್ಲಿ ಬಳಸಬಹುದು

೨. ಚಪಾತಿ ಹಿಟ್ಟಿನ ಜೊತೆಗೆ ಸೇರಿಸಬಹುದು

೩. ಬ್ರೆಡ್ಡಿಗೆ ಹಚ್ಚುವ ಪೀನಟ್ ಬಟರ್ ಮನೆಯಲ್ಲೇ ತಯಾರಿಸಬಹುದು.
(ಇದು ಬೆಣ್ಣೆ ಅಥವಾ ಮಾರ್ಜರೀನ್ ಗಿಂತ ಆರೋಗ್ಯಕರ)

೪. ಇದರ ಚಟ್ನಿಪುಡಿ ಮೊಸರಿನೊಂದಿಗೆ ಚಪಾತಿ ಜೊತೆ ಸವಿಯಲೂ ಚೆಂದ.

೫. ಸಲಾಡ್ ನಲ್ಲಿ ಬೆರೆಸಿದರೆ ಬಲು ರುಚಿಕರ

ರಂಗೋಲಿ ಬುಕ್

ರಚನೆ: ಶ್ರೀಮತಿ ಪುಷ್ಪ ವೆಂಕಟೇಶ್







ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ

ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ



ಸೌತೇಕಾಯಿ ಸಿಹಿದೋಸೆ (ಉಡುಪಿ ಶೈಲಿ)

ಏನೇನು ಸಾಮಾನು ಬೇಕು : ಅಕ್ಕಿ ಮೂರುಲೋಟ,ಸೌತೇಕಾಯಿತುರಿ ಎರಡು ಲೋಟ,ತೆಂಗಿನಕಾಯಿ ತುರಿ ಮುಕ್ಕಾಲು ಲೋಟ,ಬೆಲ್ಲದ ಪುಡಿ ಒಂದುಲೋಟ,ಉಪ್ಪು ಒಂದು ಚಮಚ

ಮಾಡುವ ಬಗೆ:

*ಅಕ್ಕಿ ಎರಡು ಘಂಟೆ ನೆನೆಸಿ ತೊಳೆದು ರುಬ್ಬಿ

*ರುಬ್ಬುವಾಗ ಅದಿನ್ನೂ ತರಿತರಿಯಾಗಿದ್ದಾಗ ಕಾಯಿ,ಬೆಲ್ಲ,ಉಪ್ಪು ಹಾಕಿ ನುಣ್ಣಗೆ ರುಬ್ಬಿಕೊಳ್ಳಿ

*ಸೌತೇಕಾಯಿ ತುರಿ ಬೆರೆಸಿ

*ಕಾದ ಕಾವಲಿಗೆ ಎಣ್ಣೆ ಸವರಿ ದೋಸೆ ಹುಯ್ಯಿರಿ.

ಇನ್ನೂ ನೂರಾರು ರೆಸಿಪ್ಪೆಗಳಿಗೆ **www.sugamakannada.com** ಗೆ ಭೇಟಿಕೊಡಿ.

ರೆಸಿಪಿ ಕೊಡ್ತೀರಾ!

ಹೊರನಾಡ ಚಿಲುಮೆಗೆ - ಗಣ್ಯರ ಶುಭ ಹಾರೈಕೆಗಳು



ಸಿಡ್ನಿಯಲ್ಲಿ ಗಂಧದ ಗುಡಿಯ ನುಡಿ ತೇರಿಗೆ ಮತ್ತೊಂದು ಹೊನ್ನ ಮುಕುಟ. ಕೆಲವು ದಶಕಗಳ ಹಿಂದಷ್ಟೇ ಪ್ರಾರಂಭವಾಗಿರುವ ಸಿರಿನುಡಿಯ ರಥೋತ್ಸವದಲ್ಲಿ, ನಾಡು, ನುಡಿಯನ್ನಗಲಿ ಬಂದ ಕನ್ನಡಾಂಬೆಯ ಸುತರಿಗೆ ಅನಾಥ ಪ್ರಜ್ಞೆ ಕಾಡದಿರುವಂತೆ, ನುಡಿಯ ಮಡಿಲನ್ನು ಸ್ಥಾಪಿಸುವ ನಿಟ್ಟಿನಲ್ಲಿ ಶ್ರಮ ವಹಿಸುತ್ತಿರುವವರು ಅನೇಕರು.

ಅಂಥಹ ಒಂದು ಮುಂಚೂಣಿಯಲ್ಲಿರುವ ಕನ್ನಡ ಸೇವೆಯ ಸಂಘಟನೆ ಸುಗಮ ಕನ್ನಡ ಕೂಟ. ಇವರು ನಡೆಸುವ ``ಸಿಡ್ನಿ ಕನ್ನಡ ಶಾಲೆ" ಮನೆ ಮಾತಾಗಿರುವುದು ಎಲ್ಲರಿಗೂ ತಿಳಿದ ವಿಷಯ. ಕನ್ನಡಿಗರಿಗೆ ಇನ್ನಷ್ಟು ಸಿಹಿ ಬಡಿಸೋಣವೆಂದು ಈಗ ಇವರು ಪ್ರಾರಂಭಿಸುತ್ತಿರುವ ನೂತನ ಮಾಸಪತ್ರಿಕೆಯೂ ಯಶಸ್ಸು ಹಾಗೂ ಜನಪ್ರಿಯತೆಯ ಉತ್ತುಂಗವೇರಿ ನಿಲ್ಲಲಿ. ಹಲವಾರು ವರ್ಷಗಳ ನಮ್ಮ ಕನಸು ನನಸಾಗುತ್ತಿರುವ ಈ ಶುಭೋದಯದ ಮುಹೂರ್ತದಲ್ಲಿ, ಕನ್ನಡದ ಕೈಂಕರ್ಯಕ್ಕಾಗಿ ಮುಡಿಪಾಗಿಟ್ಟಿರುವ ಇವರ ಕೈ ಕಲ್ಪವೃಕ್ಷವಾಗಲೆಂದು ತುಂಬು ಹೃದಯದ ಹಾರೈಕೆಗಳು.

ಶ್ರೀ ಅಶೋಕ್ ಕುಮಾರ್
ಮುಖ್ಯ ಸಂಪಾದಕರು, ಭಜನ ಸಂಧ್ಯಾ

ಆತ್ಮೀಯ "ಹೊರನಾಡ ಚಿಲುಮೆ" ಇ-ಮಾಸಪತ್ರಿಕೆ ಬಳಗದ ಎಲ್ಲಾ ಬಂಧುಗಳಿಗೆ ನಮ್ಮೆಲ್ಲರ ಹಾರ್ದಿಕ ಅಭಿನಂದನೆಗಳು.ಕನ್ನಡದಲ್ಲಿ ಇ-ಮಾಸಪತ್ರಿಕೆ ಹೊರತರುವ ಪ್ರಯತ್ನ ಆ ಭಗವಂತನ ದಯೆಯಿಂದ ಸಂಪೂರ್ಣವಾಗಿ ಸಫಲವಾಗಲೆಂದು ಹಾರೈಸುತ್ತೇವೆ.ಈ ಇ-ಮಾಸಪತ್ರಿಕೆ ಮೂಲಕ ಕನ್ನಡಿಗರಿಗೊಂದು ಹೊಸ ಆಯಾಮವನ್ನು ನಿರ್ಮಾಣ ಮಾಡಲು ಹೊರಟಿರುವ ನಿಮ್ಮ ಪ್ರಯತ್ನ ಪ್ರಸಂಶನೀಯವಾದದ್ದು.ಹಿಂದೂ ಸ್ವಯಂ ಸೇವಕ ಸಂಘದ ಎಲ್ಲಾ ಕಾರ್ಯಕರ್ತರ ಪರವಾಗಿ ಈ ಮಹತ್ವಪೂರ್ಣ ಪ್ರಯತ್ನಕ್ಕೆ ಶುಭಾಶಯಗಳನ್ನು ಕೋರುವ ನಿಮ್ಮವ..

ವಾಸು ರಮ್ಯವರನ್
ಹಿಂದೂ ಸ್ವಯಂ ಸೇವಕ ಸಂಘ
ಆಸ್ಟ್ರೇಲಿಯಾ ವಿಭಾಗದ ಪ್ರಧಾನ ಕಾರ್ಯವಾಹ

ಈ ಹೊತ್ತಿಗೆ ತಕ್ಕ ಕನ್ನಡ ಹೊತ್ತಿಗೆ
ಏರ್ಪಡಿಸಿ ಕಳಿಸುತ್ತಿರುವ
'ಸುಗಮ ಕನ್ನಡ ಕೂಟ'ಕ್ಕೆ
ನಮ್ಮ ನಲ್ವಾರೈಕೆ. ನಿಮ್ಮ ಕಸುವು ಹೆಚ್ಚಲಿ.

~ ಸುದರ್ಶನ್ ~

~~~

'ತಲ್ಲಣ' ಚಿತ್ರ ನಿರ್ಮಿಸಿರುವ 'ತನ್ಮಯ ಚಿತ್ರ'ದಿಂದ

ಆತ್ಮೀಯರೇ,

IAAFA ಪರವಾಗಿ "ಹೊರನಾಡ ಚಿಲುಮೆ" ಇ-ಮಾಸ ಪತ್ರಿಕೆಗೆ ನಮ್ಮ ನಲ್ಮೆಯ ಶುಭಾಶಯಗಳು. ಗೌರವಯುತ ಸಮಾಜ ಕಟ್ಟಲು ನಾವು ನಿಮ್ಮೊಡನೆ ಕೈ ಜೋಡಿಸಿರುವುದು ನಮಗೆ ಹೆಮ್ಮೆಯ ಸಂಗತಿ. ನಮ್ಮ ಈ ಜಂಟಿ ಪ್ರಯತ್ನದಲ್ಲಿ ನಿಮ್ಮ ಸಂಬಂಧ ಮತ್ತು ನೀವು ಮಾಡಿ ತೋರಿಸಿರುವ ಕೆಲಸಕ್ಕೆ ನಾವು ಕೃತಜ್ಞರಾಗಿದ್ದೇವೆ. ನೀವು ಹೊರತರುವ ನಿಜವಾದ, ಪ್ರಾಮಾಣಿಕವಾದ, ಶುದ್ಧವಾದ ಅಷ್ಟೇ ಸುಂದರವಾದ ವರದಿಯನ್ನು ನೋಡಲು ಉತ್ಸುಕರಾಗಿದ್ದೇವೆ. ನಿಮ್ಮ ಈ ಪ್ರಯತ್ನ ಯಶಸ್ವಿಯಾಗಲಿ ಎಂದು ಹಾರೈಸುತ್ತೇವೆ.

ಮೆಚ್ಚುಗೆಗಳೊಂದಿಗೆ,
ಬಾಲಾಜಿ ವೆಂಕಟರಂಗನ್
ಅಧ್ಯಕ್ಷರು, IAAFA Inc.

ನೀವು 'ಹೊರನಾಡ ಚಿಲುಮೆ ' ಎಂಬ ಇ-ಮಾಸಪತ್ರಿಕೆ ಹೊರತರಲು ನಿರ್ಧರಿಸಿರುವುದು ತುಂಬ ಸಂತೋಷದ ಸಂಗತಿ.

ಅನೇಕ ವಿಧವಾದ ರಚನೆಗಳಿಗೂ ಈ ಪತ್ರಿಕೆಯಲ್ಲಿ ಕಾಣಸಿಗುವ ಅವಕಾಶವಿರುವುದರಿಂದ ಈ ನಿಮ್ಮ ಯೋಜನೆ ಜನಪ್ರಿಯವಾಗುವುದರಲ್ಲಿ ಸಂದೇಹವಿಲ್ಲ . ಸಿಡ್ನಿ ಮಾತ್ರವೇ ಅಲ್ಲದೆ ಜಗದಾದ್ಯಂತದಲ್ಲಿ ನೆಲಸಿರುವ ಎಲ್ಲ ಕನ್ನಡಿಗರೂ ಈ ನಿಯತಕಾಲಿಕೆಯನ್ನು ಸ್ವಾಗತಿಸುವರು ಎಂದು ನನ್ನ ನಂಬಿಕೆ .
'ಹೊರನಾಡ ಚಿಲುಮೆ ' ಯಶಸ್ವಿಯಾಗಿ ನಡೆಯಲಿ. ನಿಮಗೆ ಶುಭವಾಗಲಿ.

ಡಾ|| ಮಧುಸೂದನ

ಹೊರನಾಡ ಚಿಲುಮೆಯ ಬಳಗಕ್ಕೆ ಶುಭ ಕೋರುವ

ರಾಜ್ ನಟರಾಜನ್ (OZ Indian TV)

~~~

ಕಥಾ ಚೆಲುಮೆ

ಜಾಣ ಕುರುಡ

ಲೇಖಕರು: ಕನಕಾಪುರ ನಾರಾಯಣ

ರಾಜನೊಬ್ಬ ಬೇಟೆಗೆ ಹೋಗಿ ಹಿಂತಿರುಗುವಾಗ ಒಂದು ತೋಟದ ಹಾದಿಯಲ್ಲಿ ಹಾದು ಹೋಗುತ್ತಿರಲು ಅಲ್ಲಿ ಮಾವಿನ ತೋಪೊಂದು ಕಂಡಿತು.ತನ್ನ ಸೇವಕರಿಗೆ ಒಂದಷ್ಟು ಹಣ್ಣುಗಳನ್ನು ಕಿತ್ತು ತರಲು ಆಜ್ಞೆ ಮಾಡಿದ. ಅಲ್ಲೇ ದಾರಿಯಲ್ಲಿ ಸಾಗುತ್ತಿದ್ದ ಒಬ್ಬ ಕುರುಡ ಅಯ್ಯೋ ಎಲ್ಲಿ ಬಂತು ಮಾವಿನ ಹಣ್ಣು? ಏನೂ ಇಲ್ಲ ಅಲ್ಲಿ ಅಂದನು. ಅವನ ಮಾತಿಗೆ ಬೆಲೆ ಕೊಡದೆ ಸೇವಕರು ತೋಟಕ್ಕೆ ನುಗ್ಗಿ ಬರಿಗೈಯಲ್ಲಿ ತಿರುಗಿ ಬಂದರು.ರಾಜನಿಗೆ ಕುತೂಹಲವಾಗಿ ಆ ಕುರುಡನನ್ನು ಕೂಗಿ "ಅಯ್ಯಾ ನಿನಗೆ ಹೇಗೆ ಗೊತ್ತು ಅಲ್ಲಿ ಮಾವಿನ ಹಣ್ಣು ಇಲ್ಲ ಅಂತಾ?" ಅಂದ. ಅದಕ್ಕೆ ಆತ "ಸ್ವಾಮೀ ಮಾವಿನ ಕಾಲ ಮುಗಿದು ಎರಡು ತಿಂಗಳಾಯ್ತು, ನಿಮಗೆ ಕಾಣುವುವು ಬರೀ ಕೊಳೆತ, ಕೆಟ್ಟ ಹಣ್ಣುಗಳು". ಕುರುಡನಾದರೂ ಆತನ ಜಾಣ್ಮೆಯನ್ನು ಮೆಚ್ಚಿ ರಾಜ ಆತನನ್ನು ತನ್ನ ರಾಜ್ಯಕ್ಕೆ ಕರೆತಂದ. ಊರ ಹೊರಗೆ ಒಂದು ಗುಡಿಸಿಲು ಕಟ್ಟಿಸಿಕೊಟ್ಟು. ದಿನಕ್ಕೆ ಎರಡುಹೊತ್ತು ಊಟದ ವ್ಯವಸ್ತೆ ಮಾಡಿಕೊಟ್ಟ.

ಒಮ್ಮೆ ರಾಜ್ಯಕ್ಕೆ ಬೇರೆ ದೇಶದ ವ್ಯಾಪಾರಿ ಬಂದು ವಜ್ರವನ್ನು ರಾಜನಿಗೆ ಮಾರಲು ಅರಮನೆಗೆ ನಡೆದ.ಎಲ್ಲರಿಗೂ ಅವನಲ್ಲಿದ್ದ ವಜ್ರದ ಸಂಗ್ರಹ ನೋಡಿ ಕೊಳ್ಳುವ ಆಸೆಯಾಯಿತು. ಆದರೆ ರಾಜನಿಗೆ ಅನುಮಾನ ವಾಯಿತು, "ಎಲ್ಲೆ ವ್ಯಾಪಾರಿಯೇ ಇವು ಅಸಲೀ ವಜ್ರಗಳು ಎನ್ನುವುದನ್ನು ಹೇಗೆ ನಂಬುವುದು?" ಎಂದನು. ವ್ಯಾಪಾರಿ "ಬೇಕಿದ್ದರೆ ನಿಮ್ಮಲ್ಲೇ ಇರುವ ಪರಿಣಿತರನ್ನು ಕೇಳಿ ಪರೀಕ್ಷಿಸಿ ನೋಡಿ" ಎಂದನು. ಆಗ ರಾಜನಿಗೆ ಆ ಕುರುಡನ ನೆನಪಾಯಿತು,ಅವನನ್ನು ಅರಮನೆಗೆ ಕರೆತಂದರು.ವಿಷಯ ತಿಳಿಸಿದರು.ಸಭೆಯಲ್ಲಿದ್ದವರಿಗೆ ನಗು "ಈ ಕುರುಡ ಹೇಗೆ ತಾನೇ ಹೇಳಿಯಾನು?" ಅವನು ರಾಜನ ಬಳಿ ಇದ್ದ ಒಂದು ಹಳೆಯ ವಜ್ರವನ್ನು ಕೇಳಿ ಪಡೆದನು.ನಂತರ ವ್ಯಾಪಾರಿಯ ಬಳಿ ಒಂದನ್ನು ಕೇಳಿ ಪಡೆದು ಅಲ್ಲೇ ಕಿಟಕಿಯ ಬಳಿ ಹೋಗಿ ನಿಂತನು. ಕೆಲವು ನಿಮಿಷಗಳ ಕಾಲ ಅಲ್ಲೇ ನಿಂತು ನಂತರ ಹಿಂತಿರುಗಿ ಬಂದು ವ್ಯಾಪಾರಿ ವಜ್ರ ಎಂದು ಹೇಳಿ ಕೊಟ್ಟದ್ದನ್ನು ಅವನ ಕೈಗೇ ಇಟ್ಟನು. ಬಳಿಕ ರಾಜನ ಬಳಿ ಬಂದು ವ್ಯಾಪಾರಿ ಕೊಟ್ಟ ವಜ್ರ ನಿಜವಾದ ವಜ್ರವಲ್ಲ ಬರೀ ಗಾಜಿನ ತುಂಡು ಎಂದನು.ವ್ಯಾಪಾರಿ ತಲೆ ತಗ್ಗಿಸಿದನು. ಎಲ್ಲರಿಗೂ ಆಶ್ಚರ್ಯ, ಸೇವಕರು ಮೋಸದ ವ್ಯಾಪಾರಿಯನ್ನು ಹೊಡೆದೋಡಿಸಿದರು.

ನಂತರ "ನಕಲಿ ವಜ್ರವನ್ನು ಹೇಗೆ ಕಂಡು ಹಿಡಿದೆ" ಎಂದು ರಾಜನು ಕೇಳಿದನು. ಅದಕ್ಕೆ ಆ ಕುರುಡನು "ಅಯ್ಯಾ ರಾಜ, ಗಾಜು ಬಿಸಿಲಿಗೆ ಹಿಡಿದಾಗ ಬಿಸಿಯಾಗುತ್ತದೆ ಆದರೆ ವಜ್ರ ಆಗದು" ಎಂದ. ಅವನ ಜಾಣ್ಮೆ ಮೆಚ್ಚಿ ರಾಜ ಅವನಿಗೆ ಬಹುಮಾನವಿತ್ತ. ಹೀಗೇ ಆ ಕುರುಡ ರಾಜನಿಗೆ ತುಂಬಾ ಉಪಕಾರಿಯಾಗಿ ಇದ್ದ. ಹೀಗೆ ಹಲವಾರು ಸಂದರ್ಭಗಳು ಬಂದಾಗ ಯಾರಿಂದಲೂ ಆಗದ ಕೆಲಸ ಕುರುಡ ತನ್ನ ಬುದ್ಧಿವಂತಿಕೆಯಿಂದ ರಾಜನಿಗೆ ಸಹಕಾರಿಯಾಗುತ್ತಾ ಬಂದ.

ಕೆಲವು ವರ್ಷಗಳು ಕಳೆದವು. ರಾಜ ಒಮ್ಮೆ ಒಂಟಿಯಾಗಿದ್ದಾಗ ಕುರುಡನನ್ನು ಕರೆದು " ನಾನು ಬಹಳ ದಿನಗಳಿಂದ ಒಂದು ವಿಷಯ ನಿನ್ನಲ್ಲಿ ಹೇಳಿಕೊಳ್ಳಬೇಕು ಅನ್ನಿಸುತ್ತಿದೆ, ಇದು ತೀರಾ ಸ್ವಂತ ವಿಷಯ, ಅದೇನೆಂದರೆ ನಾನು ಈ ರಾಜ್ಯವನ್ನು ಅನ್ಯಾಯವಾಗಿ ಕಸಿದುಕೊಂಡು ರಾಜನಾದೆ" ಅಂದ. ಅದಕ್ಕೆ ಆ ಕುರುಡ "ಅದು ನನಗೆ ಎಂದೋ ತಿಳಿದಿತ್ತು ಸ್ವಾಮಿ" ಎಂದು ಸುಲಭವಾಗಿ ಉತ್ತರಿಸಿದ. ರಾಜನಿಗೆ ಅಚ್ಚರಿಯಾಯಿತು. "ಹಾ! ನಿನಗೆ ಮೊದಲೇ ತಿಳಿದಿತ್ತಾ? ಯಾರು ನಿನಗೆ ಹೇಳಿದ್ದು? " ಎಂದು ಕುತೂಹಲದಿಂದ ಕೇಳಿದ. ಅದಕ್ಕೆ ಆ ಜಾಣನ ಉತ್ತರ ಹೀಗಿತ್ತು

"ಸ್ವಾಮೀ ನನ್ನನ್ನು ಉಪಯೋಗಿಸಿಕೊಳ್ಳಲು ನಿಮ್ಮೂರಿಗೆ ಕರೆತಂದು ಊರ ಹೊರಗೆ ಗುಡಿಸಿಲಿನಲ್ಲಿರಿಸಿ ಎರಡೇ ಎರಡು ಹೊತ್ತು ಊಟ ಬಿಟ್ಟು ಬೇರೇನೂ ವಿಚಾರಿಸಿಕೊಳ್ಳದಿದ್ದಾಗಲೇ ಅರಿವಾಗಿತ್ತು" ಎಂದು ಸಮಾಧಾನವಾಗಿ ಹೇಳಿದ. ರಾಜನು ತಲೆ ತಗ್ಗಿಸಿ ನಿಂತ. ತಾನೂ ಮುಂದೆ ಭೋಗ ಭಾಗ್ಯ ಅನುಭವಿಸುದನ್ನು ಕಡಿಮೆ ಮಾಡಿ ಜ್ಞಾನಕ್ಕಾಗಿ ಹಿರಿಯರ ಸಂಗ ಬೆಳೆಸಿ ಸ್ವಂತ ಬುದ್ಧಿಯಿಂದ ರಾಜ್ಯಭಾರ ನಡೆಸಿದ.

ಇದೇನ್ಲಾ ಇದು

೧. ಕಿತ್ತರೆ ಬಾಡುವುದಿಲ್ಲ, ನೆಟ್ಟರೆ ಬೆಳೆಯುವುದಿಲ್ಲ, ಇದಿಲ್ಲದೆ ಮನುಜರಿಗೆ ಲಕ್ಷಣವಿಲ್ಲ

೨. ಕಾಡಿನಲ್ಲೇ ಹುಟ್ಟತ್ತೆ ಕಾಡಿನಲ್ಲೇ ಬೆಳೆಯತ್ತೆ ಕಡಿದರೆ ಕಂಪು ಸೂಸತ್ತೆ

ಉತ್ತರಕ್ಕೆ ಪುಟ ೫ ನೋಡಿ

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: horanadachilume@gmail.com

Contact Mr. Nagendra EMAIL
0401193852

Contact Mr.Sathya Bhat EMAIL
Ph 02 9646 5679
Mobile 0412 918 511

Contact Mr Umesh EMAIL
0401 034 456

Contact Mr Eranna Gotyal EMAIL
0404 215 605

ಕಾವ್ಯ ಚಿಲುಮೆ

ದಹಿಸುತಿದೆ ಏಕಾಂತ...

ಅಂತರಾಳದ ಮಾತು ಆಡಲಾರದೆ ಹೋದೆ
ನೀ ನನ್ನ ಸನಿಹದಲಿ ಇದ್ದೆ ಆಗ...
ಹಾಡಾಗಿಹುದು ಗೆಳೆಯ, ಆ ನುಡಿಗಳೆಲ್ಲ
ಕೇಳಲದನು ನೀನಿಲ್ಲಿ ಇಲ್ಲ ಈಗ...

ನಭಕೆ ಮುಸುಕಿದೆ ಮುಗಿಲು
ಹಗಲ ನುಂಗಿದೆ ಇರುಳು
ಎದೆಯ ಹಿಂಡಿದೆ
ನನ್ನ ಮನದ ಅಳಲು...

ನನಸಿನೊಳೊ
ಕನಸಿನೊಳೊ
ಒಮ್ಮೆ ಕಾಣಿಸಿ ಹೋಗು
ಸುಮ್ಮನಾಗಲಿ ನನ್ನ
ತುಡಿವ ಕರುಳು

ರಚನೆ: ಮಾಲು

ನಿಜ ದೇವರು

ಕೊಡಗಳಾ ತುಂಬೆಲ್ಲ ಹಾಲು ತುಪ್ಪವಹರಿಸಿ,
ಅಡಿಯಿಂದ ಮುಡಿವರೆಗೆ ಬಂಗಾರವನೆ ತೊಡಿಸಿ,
ಹಗಲಿರುಳು ಜಪಿಸಿದರು ಕೋಟಿ ನಾಮಗಳನ್ನು,
ಶಿಲೆಯಾಗಿಯೇ ಉಳಿದನಾ ದೇವನು.ಶಿಲೆಯಾಗಿಯೇ ಉಳಿದನಾದೇವನು ,

ಹಾಲುಣಿಸಿ ಎದೆಗವಚಿ ಮುತ್ತಿಟ್ಟು ಸಲಹಿ,
ಅಡಿಯಿಂದ ಮುಡಿವರೆಗೆ ಹೂವಂತೆ ಬೆಳೆಸಿ,
ಹಗಲಿರುಳು ಕಣ್ರೆಪ್ಪೆ ತಾವಾಗಿ ಕಾಪಾಡಿ,
ಅನುಕ್ಷಣವು ನಿನಗಾಗಿ ಮಿಡಿದರವರು,
ಹಡೆದವರೆ ಅಲ್ಲವೆ ನಿಜ ದೇವರು.

ಕಾಶಿ ಕೈಲಾಸವನು ಸುತ್ತಿ ಬಂದೂ,
ತಿರುಪತೀ ಬದರಿಯನು ಹತ್ತಿ ಬಂದು,
ಗಂಗಾದಿ ತೀರ್ಥದಲಿ ಮುಳುಗೀ ಮಿಂದರೂ,
ಶಿಲೆಯಾಗಿಯೇ ಉಳಿದನಾದೇವನೂ.ಶಿಲೆಯಾಗಿಯೇ ಉಳಿದನಾದೇವನು ,

ಕಣ್ಣ ಮುಂದಿನ ದೇವರಾ ಕಾಣದಾದೆ,
ನಿನ್ನ ಹರಸು ಹೃದಯವಾ ಅರಿಯದಾದೆ ,
ಜೀವನದ ಸಂಜೆಯಲಿ ಬಳಲೀ ನೊಂದಿರಲು ,
ಶಿಲೆಯಾದೆ ನೀನೇಕೆ ಆ ಪ್ರೀತಿಗೆ ,
ಹಡೆದವರೆ ಅಲ್ಲವೆ ನಿಜ ದೇವರು..

ರಚನೆ: ನಾಗ ಶೈಲ ಕುಮಾರ್

ನಮ್ಮವರ ಬರಹ / ಬ್ಲಾಗ್ ವಿವರ

(ಹೆಸರಿನ ಮುಂದಿರುವ ಲಿಂಕ್ ಗಳನ್ನು ಕ್ಲಿಕ್ ಮಾಡಿ)

ಶ್ರೀನಿವಾಸ್ ಅವರ ಬರಹ - ಕೆಂಡ ಸಂಪಿಗೆಯಲ್ಲಿ

ಸುದರ್ಶನ್ ಅವರ ಬರಹ - ಕೆಂಡ ಸಂಪಿಗೆಯಲ್ಲಿ
ಸುದರ್ಶನ್ - ಇವರ ಬ್ಲಾಗ್

ಕನಕಾಪುರ ನಾರಾಯಣ - ಇವರ ಬ್ಲಾಗ್

ಬದರಿ ತ್ಯಾಮಗೊಂಡ್ಲು - ಇವರ ಬ್ಲಾಗ್

ಬಾಣ ಕರ್ನಾಟಕ

೧. "ಕನ್ನಡ" ಎಂಬ ಊರು (ತಾಲೂಕುಕೇಂದ್ರ) ಎಲ್ಲಿದೆ?
೨. ಕನ್ನಡ ದೇವಿಗೆಂದೇ ಮೀಸಲಾಗಿರುವ, ಸುಮಾರು ಮುನ್ನೂರು ವರ್ಷಗಳಷ್ಟು ಹಿಂದಿನ ಶ್ರೀ ಭುವನೇಶ್ವರಿ ದೇವಾಲಯ ಎಲ್ಲಿದೆ?

ಸರಿ ಉತ್ತರಕ್ಕೆ ಪುಟ ೧೦ ನೋಡಿ

ಹಾಸ್ಯ ಚಿಲುಮೆ

ಹುಬ್ಬಳ್ಳಿಯಲ್ಲಿ ಗಣಪತಿ ಹಬ್ಬಕ್ಕೆ ಚಂದಾ ವಸೂಲಿಗೆ ಬಂದ ಹುಡುಗರು ಮನೆಯ ಬಾಗಿಲಲ್ಲಿದ್ದ ಬಾಲಕನನ್ನು
"ನಿಮ್ಮ ಫಾದರ್ ಇದ್ದಾರೇನಲಯಪ್ಪ? ಸ್ವಲ್ಪ ಕರಿ ಮತ್ತ"
ಹುಡುಗ ಹೇಳಿದ "ಇಲ್ರೀ"....
"ಹೋಗ್ಲಿ ಮದರ್?"..."ಇಲ್ರೀ".....
ಹೋಗ್ಲಿ "ಬ್ರದರ್ ಇದ್ದರಾ?".....
"ಅದಾರ್ರಿ ಆದ್ರೆ ಬರಾಂಗಿಲ್ಲ"
"ಯಾಕೆ?".....
"ತೊಟ್ಟಿಲಲ್ಲಿ ಮಲಗಿದ್ದಾರ್ರಿ"

ಸಾಲಗಾರ ಸೋಮಣ್ಣ ಬ್ಯಾಂಕ್ ಗೆ ಪರ್ಮನೆಂಟ್ ಗಿರಾಕಿ ""ಸಾಮೀ ಕುರಿ ಸಾಲ, ಹಸು ಸಾಲ, ಬಾವಿ ಸಾಲ, ಪಂಪ್ ಸಾಲ, ಬರಗಾಲ ಸಾಲ, ಬೀಜ ಸಾಲ, ಗೊಬ್ಬರ ಸಾಲ, ಇದು ಬಿಟ್ಟು ಬೇರೇ ಯಾವ್ದಾದ್ರೂ ಸಾಲ ಐತಾ" ಅಂತ ಕೇಳಿದ. ಅದಕ್ಕೆ ಬ್ಯಾಂಕ್ ಮ್ಯಾನೇಜರ್ ಅದೆಲ್ಲಾ ಮೊದಲು ತೀರಿಸು,ಇನ್ಯಾವ್ದೂ ಸಾಲ ಇಲ್ಲ ಹೋಗು" ಎಂದ.
ಅದಕ್ಕೆ ಸೋಮಣ್ಣ "ಒಗ್ಲೀ ಯಾವ್ದಾದ್ರೂ ಮನ್ನ ಆಗೋ ಸಾಲ ಐತಾ?" ಅಂದ.

ಇದೇನ್ಲಾ ಇದು – ಉತ್ತರ

೧. ಕೂದಲು 2. ಶ್ರೀ ಗಂಧ

ಏನಪ್ಪಾ ಇದು ಗಾಳಿ ಮಾತು ಗಾದೆ ಮಾತು ಅಂತ ಕೇಳುತ್ತಾ ಇದ್ದೀರಾ ? ಗಾಳಿಯಲ್ಲಿ ತೂರಿಕೊಂಡು ಹಿಂದಿನವರಿಂದ ನಮಗೆ ಮಾತುಗಳಲ್ಲಿ ಮಾತ್ರ ಸಿಕ್ಕಿದ್ದು, ಕೇಳಿದ್ದು, ಆಡಿದ್ದು ಮತ್ತು ಅನುಭವಿಸಿದ್ದು . ಈ ಗಾದೆಗಳು ಯಾರಿಂದ ಯಾರಿಗೋ ವರ್ಗಾಯಿಸಿ ಜನರ ಬಾಯಿಂದ ಬಾಯಿಗೆ ಹರಿದು ಬಂದಿರುವ ನಾಣ್ನುಡಿಗಳು ಎಂದರೂ ತಪ್ಪಿಲ್ಲ. " **ವೇದ ಸುಳ್ಳಾದರೂ ಗಾದೆ ಸುಳ್ಳಾಗದು** " ಎನ್ನುತ್ತಾರೆ ಹಿರಿಯರು. ಗಾದೆಗಳು ಜನ ಜೀವನಕ್ಕೆ ಕನ್ನಡಿ ಹಿಡಿದ ಹಾಗೆ .

ನಾನು ಕೆಲವು ಗಾದೆಗಳನ್ನು ವಿಶ್ಲೇಷಣೆ ಮಾಡಲು ಇಷ್ಟ ಪಡುತ್ತೇನೆ . ನಾನು ಗಾದೆ ನೋಡುವ ರೀತಿಯನ್ನು ಹಾಸ್ಯ ರೂಪಕವಾಗಿ ಓದಿ ನಕ್ಕು ಬಿಡಿ. ಇನ್ನು ತಡವೇಕೆ? ಬನ್ನಿ ನನ್ನ ಜೊತೆ ಮರೆತು ಹೋಗಿರಬಹುದಾದ ಕೆಲವು ಗಾದೆಗಳನ್ನು ನೆನಪಿಸಿಕೋಳ್ಳೋಣ.

ಸಾಮಾನ್ಯವಾಗಿ ಗೆಳೆಯರನ್ನು, ನೆಂಟರು ಇಷ್ಟರನ್ನು ಮನೆಗೆ ಔತಣಕ್ಕೆ ಕರೆಯುವ ಅಭ್ಯಾಸ. ಹಾಗೆ ಕರೆದಲ್ಲಿ ಹೋಗಿ , ಪೋಗದಸ್ತಾಗಿ ಉಂಡು, ಕೆಲವೊಮ್ಮೆ ಸಿಹಿ ತಿಂಡಿಗಳು/ಖಾರ ಬೂಂದಿ ಮನೆಯವರೇ ಅತಿಥಿಗಳಿಗೆ ಚಿಕ್ಕ ಪೊಟ್ಟಣ ಕಟ್ಟಿ ಕೊಡ್ತಾರೆ . ನೋಡಿ ಆಗ **ಬರುತ್ತೆ** ನಮ್ಮ ಅತಿಥಿ ಮಹಾನುಭಾವರ ಬಾಯಿಂದ " **ಉಂಡೂ ಹೋದ ಕೊಂಡೂ ಹೋದ** " ಇನ್ನು ಪಾಶ್ಚಾತ್ಯ ದೇಶದ ಸಂಪ್ರದಾಯಕ್ಕೆ ಬರೋಣ, ಅವರು ನಮ್ಮ ಹಾಗೆ ಊಟಕ್ಕೆ ಕರೆಯುವುದು ,ತಿಂಡಿಗೆ ಕರೆಯುವುದು ಪದೇ ಪದೇ ಮಾಡಲ್ಲ. ಸ್ಟೈಲ್ ಆಗಿ ಹೋಟೆಲ್ಗೇ ಕರೆದು ಬಿಡುತ್ತಾರೆ. ನಮ್ಮ ದುಡ್ಡು ನಾವೇ ಕೊಟ್ಟು ಉಣ್ಣಬೇಕು , ಬರೀ ಅವರ ಕಂಪನಿ ಮತ್ತು ಅವರ ಸಮಯ ಮಾತ್ರ ಕರೆದವರದು . ಅಲ್ಲಿಯೂ **ಉಂಡೂ ಹೋದ ಕೊಂಡೂ ಹೋದ** ಗಾದೆ ಅನ್ವಯಿಸುತ್ತೆ ಹೇಗಂತೀರಾ? ಅಲ್ಲಿ ಏನೇನು ಆರ್ಡರ್ ಮಾಡ್ತೀವೋ ಎಲ್ಲವನ್ನೂ ತಿಂದು ಪೂರೈಸಕ್ಕೆ ಆಗಲ್ಲ. ಸರಿ ಏನು ಮಾಡುವುದು, ಸರ್ವರ್ ಗೆ ಹೇಳಿ , ಬಿಟ್ಟ ತಿಂಡಿಗಳನ್ನು ಪ್ಯಾಕ್ ಮಾಡಿಸ್ಕೋ ತಾರೆ . ಅದನ್ನು ಇವರುಗಳು ಡಾಗಿ (doggy) ಬ್ಯಾಗ್ ಅನ್ನುತ್ತಾರೆ, ಮನೆಗೆ ಹೋದ ಮೇಲೆ ನಾಯಿಗೇನಾದ್ರೂ ಹಾಕುತ್ತಾರೋ ಗೊತ್ತಿಲ್ಲ ! ಆದರೆ ಹೆಸರು ಮಾತ್ರ ನಾಯಿ ಬ್ಯಾಗ್ !!! ಇಲ್ಲೂ ಆಯಿತಲ್ಲ " **ಉಂಡೂ ಹೋದ ಕೊಂಡೂ ಹೋದ** " ಈ ಸನ್ನಿವೇಶದಲ್ಲಿ ಕೊಂಡೂ ಎಂದರೆ ದುಡ್ಡು ಕೊಟ್ಟು ತಗೊಂಡ ತಿಂಡಿ ಅಂತ ಅರ್ಥೈಸಿಸಬಹುದು.

ಗಾದೆಗಳ ಮಾತುಗಳು ಹಾಸ್ಯವೇ ಸರಿ. ಗುಂಡನಿಗೆ ಪಾಪ ಮದುವೆ ಆಗಿಲ್ಲ . ತುಂಬಾ ಕಡೆ ಹೆಣ್ಣು ನೋಡಿದರೂ ಸಿಕ್ತಾ ಇಲ್ಲ. ಹೆಣ್ಣು ಸಿಗಲ್ಲ ಬಿಡಿ ಅಂತ ಅಪ್ಪ ಅಮ್ಮಾನೂ ಕೈ ಬಿಟ್ಟಾಗಿತ್ತು!!! ಹೀಗಿರಬೇಕಾರೆ ಸರಿ ಪಕ್ಕದ ಮನೆಗೆ ಒಂದು ಸಂಸಾರ ಬಂತು. ಮಗಳು ವಯಸ್ಸಿನಲ್ಲಿ ದೊಡ್ಡವಳು, ಗುಂಡನ ನೋಡಿ ಹೇಳಿದಳು " **ಮದುವೆಯಾಗೋ ಗುಂಡ ಅಂದರೆ ನೀನೇ ನನ್ನ ಹೆಂಡತಿ** ಎಂದುಬಿಡುವುದೇ!! ಇದು ಯಾರೇ ಉಪದೇಶ ಮಾಡಲು ಹೋದಾಗ ನೀವೇ ಸ್ವಲ್ಪ ಸಹಾಯ ಮಾಡಿಬಿಡಿ ಎಂದು ಹೇಳುವವರಿಗೆ ಹೇಳಿ ಮಾಡಿಸಿದ ಗಾದೆ !!! ಕೆಲಸವೇ ಆಗಿಲ್ಲ ಮುಗಿಲೆತ್ತರದ ಮಾತುಗಳು ಹೋಗುತ್ತವೆ.. ಲೇ ಅನ್ನಕ್ಕೆ ಇವಳೇ ಇಲ್ಲ ಪುಳ್ಳಿ ಪೇರ್ ರಾಮಕೃಷ್ಣ .

ನಾವು ಚಿಕ್ಕವರಾಗಿದ್ದಾಗ ಚಾಕಲೇಟ್ ಕೊಡ್ತಾರೆ, ತಿಂತೀವ ಅಂತ ಕಾಯುವ ಕಾಲ ಇತ್ತು. ಈಗ ದೊಡ್ಡವರಾಗಿದ್ದೇವೆ, ನಮ್ಮ ಸಂಪಾದನೆ, ನಮ್ಮ ಬಾಯಿ, ನಮ್ಮ ಕಾಸು. ಬೇಕಾದಷ್ಟು ಚಾಕಲೇಟ್, ಏನು ಬೇಕಾದರೂ ತಿನ್ನೋ ಕಾಲ ಬಂದಿದೆ ,ಆದರೂ ತಿನ್ನಕ್ಕೆ ಆಗಲ್ಲ . ಯಾಕೆ ಗೊತ್ತ ? ತಿಂದ ಮೈ ಕರಗಿಸುವುದು ಹೇಗೆ ಎಂಬ ದೊಡ್ಡ ಕಷ್ಟ ಬೇಡಪ್ಪ ಅಂತ. ಇಲ್ಲಿ ಹೇಳಬಹುದು ನೋಡಿ " **ಹಲ್ಲಿದ್ದವಗೆ ಕಡಲೆ ಇಲ್ಲ ಕಡಲೆ ಇದ್ದವಗೆ ಹಲ್ಲಿಲ್ಲ" ಎಂಬ ಗಾದೆ !!!**

ನೋಡ್ರಪ್ಪಾ ಎಲ್ಲಾ ಕಡೆ ಸೇಲ್ ಸೇಲ್. ಏನು ತೊಗೊಳ್ಳೋದು ಏನು ಬಿಡೋದು ಗೊತ್ತಾಗಲ್ಲ . ಎಲ್ಲಿ ನೋಡಿದರಲ್ಲಿ ಕಮ್ಮಿ ದರ ಪಟ್ಟಿಗಳು ಕಣ್ಣಿಗೆ ರಾಚುತ್ತ/ನಾಚುತ್ತಾ ನಿಂತುಬಿಟ್ಟಿರುತ್ತೆ. ಸರಿ ಬಲವಂತದ ಮಾಘಸ್ನಾನದ ಹಾಗೆ ಒಳ ನುಗ್ಗಿ ಬೇಗ ಸಿಕ್ಕಿದ್ದು ಖರೀದಿಸಿ ಆಚೆ ಬಂದರೆ, ಶರ್ಟ್ ಬಟ್ಟೆ ಟವೆಲ್ ಅಳತೆ , ಬ್ಲೌಸ್ ಪೀಸ್, ಕರ್ಚೀಫ್ ಆಗಿದೆ . ಭಾರಿ ಮೋಸ . " **ಕಾಸಿಗೆ ತಕ್ಕ ಕಜ್ಜಾಯ** " ...

... ಮುಂದಿನ ಸಂಚಿಕೆಯಲ್ಲಿ ಮುಂದುವರೆಯುವುದು

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ರ	ಯಾ	ಮೆ
ಲು	ಸ	ವಿ
ಚೆ	ದ	ನೀ

ಏನ್ ರೂಲ್ಸ್ ?

ಮೇಲಿನ ಒಂಭತ್ತು ಅಕ್ಷರಗಳನ್ನು ಉಪಯೋಗಿಸಿ 2 ರಿಂದ 9 ಅಕ್ಷರಗಳಿರುವ ಪದಗಳನ್ನು ರಚಿಸಿ.

- ಮೂರಕ್ಕಿಂತ ಹೆಚ್ಚಿನ ಅಕ್ಷರ ಇರುವ ಪದಗಳು ಸಂಯುಕ್ತ ಪದಗಳಿರಬಹುದು
- ಮಧ್ಯದ ಅಕ್ಷರ "ಸ" ವನ್ನು ಒಳಗೊಂಡ ಕನಿಷ್ಟ 10 ಪದಗಳು ಇರಲೇಬೇಕು.

- ಒಂದು ಅಕ್ಷರವನ್ನು ಒಂದು ಪದದಲ್ಲಿ ಒಂದೇ ಸಲ ಬಳಸಬೇಕು
- 10 ಸಾಧಾರಣ, 15 ಉತ್ತಮ, 20+ ಅತ್ಯುತ್ತಮ
- ನಿಮ್ಮ ಉತ್ತರ ಈಮೈಲ್ ಮಾಡಿ, (horanadachilume@gmail.com)
- ಅತಿ ಹೆಚ್ಚು ಪದಗಳನ್ನು ರಚಿಸಿದ ಮೂವರ ಹೆಸರನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.
- **ಜೂನ್ 25 ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.**

ಚಿಣ್ಣರ ಚಿಲುಮೆ

ಒಂದು ದಿನ ತೆನಾಲಿ ರಾಮನ ವರ್ತನೆಯನ್ನು ಕಂಡು ರಾಜನು ಅವನನ್ನು ಕರೆದು "ನನ್ನ ರಾಜ್ಯದಿಂದ ಹೊರಗೆ ತೊಲಗು" ಎಂದ.

ಇದಾದ ಕೆಲವು ದಿನಗಳ ನಂತರ ರಾಜ ವಿಹಾರಕ್ಕೆಂದು ತನ್ನ ಕುದುರೆಯ ಮೇಲೆ ಸವಾರಿ ಹೊರಟಿರಲು ತೆನಾಲಿ ರಾಮನು ಒಂದು ಮರವನ್ನು ಏರುತ್ತಿರುವುದನ್ನು ಕಂಡನು.

"ಅರೆ ನೀನು ಇಲ್ಲಿ ಏನು ಮಾಡುತ್ತಿರುವೆ ನನ್ನ ರಾಜ್ಯ ಬಿಟ್ಟು ತೊಲಗು ಎನ್ನಲಿಲ್ಲವೇ" ಎಂದ. ಅದಕ್ಕೆ ತೆನಾಲಿ ರಾಮನು "ಪ್ರಭು ಎಲ್ಲಿ ಹೋದರೂ ಇದು ಕೃಷ್ಣದೇವ ರಾಯರ ಸಾಮ್ರಾಜ್ಯ ಎನ್ನುತ್ತಾರೆ ಜನ, ಅದಕ್ಕೆ ನೇರ ಸ್ವರ್ಗಕ್ಕೇ ಹೊರಟಿರುವೆ" ಎಂದ. ಅವನ ಜಾಣ್ಮೆಯ ಮಾತನ್ನು ಕೇಳಿ ರಾಜ ನಕ್ಕು ಆಸ್ಥಾನಕ್ಕೆ ಹಿಂತಿರುಗಲು ಹೇಳಿದ.

ಆಸ್ಟ್ರೇಲಿಯಾ ಖಂಡದ ಕನ್ನಡದ ಪ್ರಥಮ ಏಕೈಕ ಟ್ರಾವೆಲ್
ಏಜೆಂಟರಾದ ಆರ್ .ಸುಧೀಂದ್ರ ರಾವ್ ಅವರಿಂದ
ಸುಗಮ ಕನ್ನಡ ಕೂಟಕ್ಕೆ ಅವರ ಪ್ರಥಮ
ಇ-ಮಾಸಪತ್ರಿಕೆ "ಚಿಲುಮೆ" ಗೆ ಈ ಮೂಲಕ ಶುಭ ಹಾರೈಕೆಗಳು

SRI KRISHNA TRAVEL
Travel with a Smile
LIC No 2TA08084

ನಮ್ಮನ್ನು ದೂರವಾಣಿ ಹಾಗು ಇಮೇಲ್ ಮೂಲಕ ಸಂಪರ್ಕ ಮಾಡಬಹುದು
02 96215501 / 0415291723
sales@srikrishnatravel.com.au

Book your Air tickets with us
to fly India, Newzealand, Fiji, HongKong, Sri Lanka,Nepal or anywhere
Contact Mr Sudheendra your friendly ಕನ್ನಡ speaking agent

ಛಾಯಾ ಚಿಲುಮೆ – ಕ್ಲಿಕ್ ಕ್ಲಿಕ್ ಕ್ಲಿಕ್

ನೀವು ತೆಗೆದ ಚಿತ್ರ ಇಲ್ಲಿ ಕಾಣಬೇಕೇ

ಇ-ಮೇಲ್ ಮಾಡಿ: horanadachilume@gmail.com

ವಿವಿಡ್ ಸಿಡ್ನಿಯಲ್ಲಿ ಗಣೇಶ - ಕ್ಲಿಕ್: ಬದರಿ ತ್ಯಾಮಗೊಂಡ್ಲು

ವಿವಿಡ್ ಸಿಡ್ನಿಯಲ್ಲಿ ಜೇನು ಗೂಡಿನ ಮನೆ

ಕ್ಲಿಕ್: ಬದರಿ ತ್ಯಾಮಗೊಂಡ್ಲು

ವಿವಿಡ್ ಸಿಡ್ನಿ

ಕ್ಲಿಕ್: ನಾಗಶೈಲ ಕುಮಾರ್

ವಿವಿಡ್ ಸಿಡ್ನಿ

ಕ್ಲಿಕ್: ನಾಗಶೈಲ ಕುಮಾರ್

ಎಲೆಲೆ ಗುಬ್ಬಚ್ಚಿ ...

ಕ್ಲಿಕ್: ವಿನಯ್ ನಾರಾಯಣ್

ಭರಚುಕ್ಕಿಯಲ್ಲಿ ಮಂಗನ ಭರಾಟೆ

ಕ್ಲಿಕ್: ನಾಗಭೂಷಣ್

ಬ್ರೂನಿ ದ್ವೀಪ, ಟಾಸ್ಮೇನಿಯ

ಕ್ಲಿಕ್: ವಿನಯ್ ನಾರಾಯಣ್

ಕುವೆಂಪು ನಿವಾಸ, ಕುಪ್ಪಳ್ಳಿ

ಕ್ಲಿಕ್: ಕನಕಾಪುರ ನಾರಾಯಣ

ಚಾಣ ಕರ್ನಾಟಕ – ಉತ್ತರ

೧. "ಕನ್ನಡ" ಎಂಬ ಊರು (ತಾಲೂಕುಕೇಂದ್ರ) ಎಲ್ಲಿದೆ? - ಮಹಾರಾಷ್ಟ್ರ ರಾಜ್ಯದ ಔರಂಗಾಬಾದಿನಲ್ಲಿ

೨. ಕನ್ನಡ ದೇವಿಗೆಂದೇ ಮೀಸಲಾಗಿರುವ, ಸುಮಾರು ಮುನ್ನೂರು ವರ್ಷಗಳಷ್ಟು ಹಿಂದಿನ ಶ್ರೀ ಭುವನೇಶ್ವರಿ ದೇವಾಲಯ ಎಲ್ಲಿದೆ? - ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದ ಭುವನಗಿರಿಯಲ್ಲಿ

ನಾನು ಪಟೌಡಿ ಅವರ ಆಟವನ್ನು ಚಿಕ್ಕವನಾಗಿದ್ದಾಗ ನೋಡಿದ್ದರೂ ಚೆನ್ನಾಗಿ ನೆನಪಿದೆ.ಭಾರತದ ನಾಯಕನಾಗಿದ್ದರು ಆಗ.ಹೈದರಾಬಾದ್ ತಂಡದಲ್ಲಿ ಕೇವಲ ಆಟಗಾರ, ಜಯಸಿಂಹ ಹೈದರಾಬಾದ್ ನಾಯಕ. ನನಗೆ ಬಹಳ ನೆನಪಿರುವ ಪಂದ್ಯ ಅಂದರೆ 1972-73 ಬೆಂಗಳೂರಿನಲ್ಲಿ ಹೊಸದಾಗಿ ಕಟ್ಟಿದ್ದ KSCA ಕ್ರೀಡಾಂಗಣದಲ್ಲಿ ದಕ್ಷಿಣವಲಯ ಮತ್ತು ಪ್ರವಾಸಿ ಇಂಗ್ಲೆಂಡ್ ವಿರುದ್ಧ ಸಿಡಿಸಿದ ಅಮೋಘ ಸೆಂಚುರಿ ಮತ್ತು ಯುವಕ ಬ್ರಿಜೇಶ್ ಪಟೇಲ್ ಅವರ ಜೊತೆಯಾಟ ನವಾಬ್ ಆಫ್ ಪಟೌಡಿ ಜೂನಿಯರ್, ಭಾರತದ ಅತ್ಯುತ್ತಮ ನಾಯಕ ಮತ್ತು ಬ್ಯಾಟ್ಸ್ಮನ್. 2011ರಲ್ಲಿ ಉಸಿರಾಟದ ತೊಂದರೆಯಿಂದ ನಿಧನ ಹೊಂದಿದರು.1961ರಲ್ಲಿ ತಮ್ಮ ಬಲಗಣ್ಣನ್ನು ಕಳೆದುಕೊಂಡ ನಂತರ ಆರು ತಿಂಗಳಲ್ಲೇ ಭಾರತವನ್ನು ಪ್ರತಿನಿಧಿಸಿದರು.ನಾಲ್ಕು ಟೆಸ್ಟ್ ಗಳ ನಂತರ ನಾಯಕ. ಅತಿ ಚಿಕ್ಕ ವಯಸ್ಸಿನಲ್ಲೇ (21ವರ್ಷ)ನಾಯಕರಾದವರು ಪಟೌಡಿ.

ಪಟೌಡಿ ಫೀಲ್ಡಿಂಗ್ ಮತ್ತು physical fitness ಗೆ ಗಮನ ನೀಡಿದ ಪ್ರಥಮ ನಾಯಕ. ಸ್ವತಃ ಒಳ್ಳೆ ಫೀಲ್ಡರ್ ಮತ್ತು ಆಕ್ರಮಣಕಾರಿ ಬ್ಯಾಟ್ಸ್ಮನ್ ಕೂಡ. ಭಾರತದ ಸ್ಪಿನ್ ಬೌಲಿಂಗ್ ಗುರುತಿಸಿ ಪ್ರೋತ್ಸಾಹಿಸಿದ ಮೊದಲಿಗರು ಪಟೌಡಿ. 60-70ರ ದಶಕದಲ್ಲಿ ಭಾರತ ಗೆದ್ದ ಎಲ್ಲ ಪಂದ್ಯಗಳಲ್ಲಿ ಸ್ಪಿನ್ನರ್ ಗಳ ಕೈವಾಡವೇ ಹೆಚ್ಚು.ಪ್ರಸನ್ನ ಬೇಡಿ,ಚಂದ್ರಶೇಖರ್ ಮತ್ತು ವೆಂಕಟರಾಘವನ್ ಅವರನ್ನು ಯಾರು ಮರೆಯಲು ಸಾಧ್ಯ. ಭಾರತ ಮೊದಲು ವಿದೇಶದಲ್ಲಿ ಗೆದ್ದದ್ದು 1968ರಲ್ಲಿ ನ್ಯೂಜಿಲ್ಯಾಂಡ್ ವಿರುದ್ಧ.

ಅದು ಪಟೌಡಿ ನಾಯಕತ್ವದಲ್ಲೇ ಮತ್ತೆ ಅದೇ ಸ್ಪಿನ್ನರ್ ಗಳ ಕೈಚಳಕದಿಂದ. 1971ರಲ್ಲಿ ಪಟೌಡಿ ಅವರನ್ನು ನಾಯಕತ್ವ ಮತ್ತು ತಂಡದಿಂದ ಕೈಬಿಡಲಾಯಿತು.ಅದೇ ವರ್ಷ ಇಂದಿರಾಗಾಂಧಿ ಇದ್ದ ಭಾರತ ಸರ್ಕಾರ ನವಾಬ್ ಗಿರಿಯನ್ನು,ರಾಜಧನವನ್ನೂ ರದ್ದು ಮಾಡಿತು.ನಂತರ ಅವರ ಹೆಸರು "ನವಾಬ್ ಆಫ್ ಪಟೌಡಿ ಜೂನಿಯರ್" ಇಂದ ಬರಿ "ಮನ್ಸೂರ್ ಆಲಿ ಖಾನ್ ಪಟೌಡಿ"ಯಾಯಿತು.ಎರಡು ಸಲ ಲೋಕಸಭೆ ಚುನಾವಣೆಗೆ ಸ್ಪರ್ಧಿಸಿ ಎರಡುಸಲ ಸೋಲನ್ನು ಅನುಭವಿಸಿದರು.ಕೆಲವು ವರ್ಷಗಳ ಹಿಂದೆ ಜಿಂಕೆ ಬೇಟೆ ಹಗರಣದಲ್ಲಿ ಸುದ್ದಿಯಾಗಿದ್ದರು.

MAK ಪಟೌಡಿ ಒಳ್ಳೆ ಕ್ರೀಡಾ ಮನೋಭಾವದ ಆಟಗಾರ, ಬಹಳಷ್ಟು ಕಿರಿಯರನ್ನು ಪ್ರೋತ್ಸಾಹಿಸಿದ್ದಾರೆ. ಅವರ ತಂದೆ ಇಫ್ತಕರ್ ಆಲಿಖಾನ್ ಪಟೌಡಿ ಕೂಡಾ ಒಳ್ಳೆ ಕ್ರೀಡಾ ಮನೋಭಾವದ ವ್ಯಕ್ತಿ, ಇಂಗ್ಲೆಂಡ್ ಮತ್ತು ಭಾರತವನ್ನು ಪ್ರತಿನಿಧಿಸಿದ್ದರು. 1932-33 ಬಾಡಿಲೈನ್ ಸೀರೀಸಿನಲ್ಲಿ ಇಂಗ್ಲೆಂದ್ ತಂಡದಲ್ಲಿ ಇದ್ದು, ನಾಯಕ ಡಗ್ಲಾಸ್ ಜಾರ್ಡೀನ್ ಕ್ರೀಡಾ ಮನೋಭಾವವಿಲ್ಲದ ಕ್ರಿಕೆಟ್ ಅನ್ನು ಸಹಿಸದೆ ಪ್ರತಿಭಟಿಸಿ ತಂಡದಿಂದ ಹೊರನಡೆದಿದ್ದರು.ಈಗ ಭಾರತ - ಇಂಗ್ಲೆಂಡ್ ನಡುವೆ ಇಂಗ್ಲೆಂಡಿನಲ್ಲಿ ನಡೆಯುವ ಪಂದ್ಯಗಳಿಗೆ ಪಟೌಡಿ ಟ್ರೋಫಿ ಎಂದು ಹೆಸರಿಡಲಾಗಿದೆ. ಪಟೌಡಿ ಒಳ್ಳೆ ಹಾಸ್ಯ ಪ್ರಜ್ಞೆ ಉಳ್ಳವರು. ಅವರು ಹೇಳಿದ ಮಾತು "ಪ್ರೆಸ್ ನವರು ನಾನು ಚೆನ್ನಾಗಿ ಆಡಿದಾಗ, ನೋಡು ಒಂದು ಕಣ್ಣಿನಲ್ಲಿ ಇಷ್ಟು ಚೆನ್ನಾಗಿ ಆಡುತ್ತಾನೆ,ಹಾಗೇ ನಾನು ಬೇಗ ಔಟ್ ಆದಾಗ ಇವನಿಗೆ 'ಬಾಲೇ ಕಾಣಲ್ಲ' .

ಸುನಿಲ್ ಗವಾಸ್ಕರ್ ಅವರು ಪಟೌಡಿ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಅವರು ಮಾಡುತ್ತಿದ್ದ ಪ್ರಾಂಕ್ ಗಳ ಬಗ್ಗೆ ಬಹಳ ವಿವರಣೆ ನೀಡಿದ್ದಾರೆ

ಪ್ರಸಿದ್ಧ ಸಿನಿಮಾ ತಾರೆ ಶರ್ಮಿಳಾ ಠಾಗೂರ್ (ಬೇಗಂ ಆಯಿಷಾ ಸುಲ್ತಾನ) ಪಟೌಡಿಯವ ಪತ್ನಿ.

ಮಗ ಸಹಿಫ್ ಆಲಿ ಖಾನ್ ಮತ್ತು ಪುತ್ರಿಯರು ಸೂಹಖಾನ್, ಸಬಾಖಾನ್.

ಪಟೌಡಿ ಸಾಧನೆ: 46 ಟೆಸ್ಟ್, 6 ಶತಕ, 1 ದ್ವಿಶತಕ.

ತಂತ್ರಜ್ಞಾನ
ಮೇ ೨೦೧೩

ಮೊಬೈಲ್ ಮಾಯಾ ಮಂತ್ರ; 20 ಸೆಕೆಂಡ್ ನಲ್ಲಿ ಪೂರಾ ಚಾರ್ಜ್!

ಕನ್ನಡ ಅನುವಾದ: ಬದರಿ ತ್ಯಾಮಗೊಂಡ್ಲು
ಸುದ್ದಿ ಮೂಲ: http://www.news.com.au

ಅರೆ! ಇವಳಾ ಅವಳು. ಇನ್ನು ಲಂಗ ಹಾಕ್ಕೊಂಡು ಕುಂಟೆ ಬಿಲ್ಲೆ ಅಡ್ತಿದ್ದಲ್ಲ. ಈಗ ಯೂನಿವರ್ಸಿಟಿಗೆ ಗೋಲ್ಡ್ ಮೆಡಲಿಸ್ಟ್. ಅಬ್ಬ! ನಂಬೋಕೆ ಆಗ್ತಿಲ್ಲ. ಹೀಗೆ ಉದ್ಗಾರ ನೀವು ಮಾಡಿರಬಹುದು ಅಥವಾ ಕೇಳಿರಬಹುದು. ಅಂತಹ ಸಾಲಿಗೆ ಸೇರಿದ್ದಾರೆ ನಮ್ಮ ಭಾರತ ಮೂಲದ 18 ವರ್ಷದ ಹುಡುಗಿ "ಈಷಾ ಖರೆ" ಅವರ ಸಾಧನೆ - ಸೂಪರ್ ಕೆಪಾಸಿಟರ್ ಮೂಲಕ 20 ಸೆಕೆಂಡುಗಳಲ್ಲಿ ನಿಮ್ಮ ಫೋನ್ ಚಾರ್ಜ್! ಅಷ್ಟೇ ಅಲ್ಲ. ಇದಕ್ಕಾಗಿ $ 50,000 ನ್ನು ಗಿಟ್ಟಿಸಿದ್ದಾಳೆ ಈ ಪೋರಿ.

ಕ್ಯಾಲಿಫೋರ್ನಿಯಾದ ಈಷಾ ಖರೆ ಅವರು ಸಂಶೋಧಿಸಿರುವ, ಮೊಬೈಲ್ ಫೋನ್ ಬ್ಯಾಟರಿಗಳ ಒಳಗೆ ಇಡಬಹುದಾದ ಈ ಸಣ್ಣ ಸಾಧನವು 20-30 ಸೆಕೆಂಡುಗಳ ಒಳಗೆ ಚಾರ್ಜ್ ಮಾಡುತ್ತೆ, ಇದರ ಅಭಿವೃದ್ಧಿಗಾಗಿ ಇಂಟೆಲ್ ಫೌಂಡೇಶನ್ ಮೂಲದ ಯುವ ವಿಜ್ಞಾನಿ ಪ್ರಶಸ್ತಿ ಕೂಡ ನೀಡಲಾಗಿದೆ. ಅಷ್ಟೇ ಅಲ್ಲದೆ ಈ ಸಾಧನ 10,000 ಚಾರ್ಜ್-ಪುನರ್ಭರ್ತಿಕಾರ್ಯ ಚಕ್ರಗಳನ್ನು ಹೊಂದಿರುತ್ತದೆ. ಅರ್ಥಾತ್ 10000 ಸತಿ ರೀ-ಚಾರ್ಜ್ ಮಾಡಬಹುದು. (ಸಾಮಾನ್ಯವಾಗಿ ರೀಚಾರ್ಜಬಲ್ ಬ್ಯಾಟರಿಗಳನ್ನು ಸುಮಾರು 1000 ಬಾರಿ ರೀಚಾರ್ಜ್ ಮಾಡಬಹುದು).



ಸದ್ಯಕ್ಕೆ ಈ ಸಾಧನವನ್ನು ಇಲ್ಲಿಯವರೆಗೆ ಕೇವಲ ಒಂದು ಎಲ್‌ಇಡಿ ಬೆಳಕಿನ ಮೇಲೆ ಪರೀಕ್ಷಿಸಲಾಗಿದ್ದು, ಫಲಿತಾಂಶ ಉತ್ತಮವಾಗಿದೆ. ಹೀಗಾಗಿ ಇದು ಮೊಬೈಲ್ ಫೋನ್ ನಂತಹ ಇತರ ಸಾಧನಗಳಲ್ಲಿ ಯಶಸ್ವಿಯಾಗಿ ಕೆಲಸ ಮಾಡುತ್ತದೆ ಎಂದು ಆಶಿಸಲಾಗಿದೆ. ಖರೆ ಅವರು ತನ್ನ ಮೊಬೈಲ್ ಫೋನ್ ಬ್ಯಾಟರಿ ಬೇಗನೆ ಖಾಲಿ ಆಗುವುದನ್ನು ನೋಡಿ ಬಹಳ ನಿರಾಶೆಗೊಂಡು ಒಂದು ಶಾಶ್ವತ ಪರಿಹಾರ ರಚಿಸಲು ಪ್ರೇರಿತಳಾದೆ, ಎಂದು ಸುದ್ದಿ ಮಾಧ್ಯಮಗಳಿಗೆ ತಿಳಿಸಿದ್ದಾರೆ. ಈ ಚಿಕ್ಕ ವಯಸ್ಸಿನ ಸಂಶೋದಕಿ ನಿಮಗೆ ಏನು ಪ್ರೇರಣೆ ಮಾಡುತ್ತಾಳೆ?

ಒಂದಂತು ಸತ್ಯ. ಪರಿಣತಿ ಒಂದೇ ಸಾಲದು, ಒಂದು ಪರಿಮಿತಿಯ ಹೊರಗೆ ಇಣುಕಿ ನೋಡುವ ಅಭ್ಯಾಸ ಬೆಳಸಿಕೊಳ್ಳಬೇಕು. ಅಲ್ಲವೇ !

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ಸುಗಮ ಗಾನ ಸಮಾಜ ಅರ್ಪಿಸುತ್ತಿದೆ

ಪಿ ಬಿ ಶ್ರೀನಿವಾಸ್ ಶ್ರದ್ಧಾಂಜಲಿ ಕಾರ್ಯಕ್ರಮ

ಶನಿವಾರ **06/07/2013**, 6 pm start (**FREE ENTRY**)
Wattle Grove Public School, Cressbrook Drive,
Wattle grove , NSW -2173
More details -http://www.sugamakannada.com/PBStribute.html

Hare Krishna ISKCON organising

Festival of Chariots
Saturday **13th July**, 10am start
Biggie Park Liverpool 2170.
Entry Free - Free Veg food - Street Parade - Cultural stage
Contact Govardhan Das on 96010290

Friends of India presents
Talks on Swami Vivekananda by Dr. Subramanian Swamy
Sunday **14th July 2013**. 4.30 PM (**Entry Free**)
Sydney Bahai Centre 107 Derby street, Silverwater 2128.
Details at www.vivekananda150year.org

Friends of India is organising
Talks on Indian Diaspora by Dr. Subramanian Swamy,
Dinner with Delegates **$50 pp**
6.30 pm on Saturday **13th July 2013**
Cherrybrook Community Centre
Shephard Drive, Cherrybrook NSW 2126
Details at www.vivekananda150year.org



"ಬಚ್ಚನ್" ಕನ್ನಡ ಚಲನಚಿತ್ರ

Melbourne
6th July 2013 - 2:30pm & 5:30pm

Venue: Union Cinema, Monash University Campus
Wellington Road, Clayton 3800

Cast: Kichcha Sudeep, Parul Yadav, Bhavana Menon,
Direction: Shashank - Production:Uday K Mehta
Music:V Harikrishna

Contact:0435161571, 0416322568 - Tickets **$15** Only

ಈ ಸಂಚಿಕೆ ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿದ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.
ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.